SPECIMEN

ಈ ಪ್ರಶ್ನೆಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು.

# GK-I

2011

ವರ್ಷನ್ ಕೋಡ್

**A**

## ಪ್ರಶ್ನೆಪುಸ್ತಿಕೆ

# ಸಾಮಾನ್ಯ ಜ್ಞಾನ

ಗರಿಷ್ಠ ಸಮಯ : 2 ಗಂಟೆಗಳು

ಗರಿಷ್ಠ ಅಂಕಗಳು : 150

## ಸೂಚನೆಗಳು

1. OMR ಉತ್ತರ ಹಾಳೆಯಲ್ಲಿ ಪ್ರಶ್ನೆ ಪತ್ರಿಕೆ ಶ್ರೇಣಿಯನ್ನು ಎನ್ ಕೋಡ್ ಮಾಡುವ ಮೊದಲು. ಈ ಪ್ರಶ್ನೆ ಪುಸ್ತಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಯಾವುದೇ ಪುಟ ಇಲ್ಲದಿರುವ ಅಥವಾ ಮುದ್ರಿತವಾಗದ ಪ್ರಶ್ನೆಗಳು ಇತ್ಯಾದಿ ಒಳಗೊಂಡಿಲ್ಲವೆಂಬುದನ್ನು ನೀವು ಪರೀಕ್ಷಿಸತಕ್ಕದ್ದು. ಮೇಲಿನ ಯಾವುದೇ ದೋಷ ಕಂಡುಬಂದಲ್ಲಿ ಅದನ್ನು ಹಿಂತಿರುಗಿಸಿ ಲಭ್ಯವಿರುವ ಪರಿಪೂರ್ಣವಾದ ಬೇರೆ ಪ್ರಶ್ನೆ ಪುಸ್ತಿಕೆಯನ್ನು ಪಡೆಯತಕ್ಕದ್ದು.
2. ಪ್ರಶ್ನೆ ಪುಸ್ತಿಕೆಯ ವರ್ಷನ್ ಕೋಡ್ **A, B, C, D....** ಅಥವಾ **H** ಅನ್ನು **OMR** ಉತ್ತರ ಪತ್ರಿಕೆಯಲ್ಲಿ ಅದಕ್ಕಾಗಿ ಒದಗಿಸಲಾಗಿರುವ ಸ್ಥಳದಲ್ಲಿ ಬರೆದು ಸಂಕೇತ (ಎನ್ ಕೋಡ್) ಗೊಳಿಸಬೇಕು.
3. ಪಕ್ಕದಲ್ಲಿ ಒದಗಿಸಿರುವ ಚೌಕದಲ್ಲೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪುಸ್ತಿಕೆಯಲ್ಲಿ ಬೇರೆ ಏನನ್ನೂ ಬರೆಯಬಾರದು.

ನೊಂದಣಿ ಸಂಖ್ಯೆ

4. ಈ ಪ್ರಶ್ನೆ ಪುಸ್ತಿಕೆ **100** ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರಶ್ನೆಯು **4** ಉತ್ತರಗಳನ್ನು ಒಳಗೊಂಡಿರುತ್ತದೆ. ನೀವು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಬೇಕೆನಿಸುವ ಉತ್ತರವನ್ನು ಆಯ್ಕೆ ಮಾಡಿಕೊಳ್ಳಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ **ಅತ್ಯುತ್ತಮವೆನಿಸುವ** ಉತ್ತರಕ್ಕೆ ಗುರುತು ಮಾಡಿ. ಏನೇ ಆದರೂ ಪ್ರತಿ ಪ್ರಶ್ನೆಗೆ ನೀವು **ಕೇವಲ ಒಂದು** ಉತ್ತರವನ್ನು ಮಾತ್ರ ಆಯ್ಕೆ ಮಾಡಬೇಕು.
5. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಉತ್ತರ ಪತ್ರಿಕೆಯ ಮೇಲೆ ಕೇವಲ **ಕಪ್ಪು** ಅಥವಾ **ನೀಲಿ ಶಾಯಿಯ ಬಾಲ್‌ಪಾಯಿಂಟ್** ಪೆನ್ನಿನಲ್ಲಿ ಮಾತ್ರ ಗುರುತು ಮಾಡಬೇಕು. ಉತ್ತರ ಪತ್ರಿಕೆ ಹಾಳೆಯಲ್ಲಿನ ಸೂಚನೆಗಳನ್ನು ಗಮನಿಸುವುದು.
6. ಎಲ್ಲಾ ಪ್ರಶ್ನೆಗಳಿಗೆ ಸಮಾನ ಅಂಕಗಳು. **ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿರಿ.** ನೀವು ಗಳಿಸುವ ಒಟ್ಟಾರೆ ಅಂಕಗಳು ನೀವು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡುವ ಸರಿಯಾದ ಉತ್ತರಗಳ ಸಂಖ್ಯೆಯನ್ನು ಮಾತ್ರ ಆಧರಿಸಿರುತ್ತದೆ.
7. ಉತ್ತರ ಪತ್ರಿಕೆಯಲ್ಲಿ ಉತ್ತರಗಳನ್ನು ಗುರುತಿಸಲು ಪ್ರಾರಂಭಿಸುವ ಮೊದಲು **ನೋಂದಣಿ ಸಂಖ್ಯೆ, ಪ್ರಶ್ನೆ ಪುಸ್ತಿಕೆಯ ವರ್ಷನ್ ಕೋಡ್** ಇತ್ಯಾದಿಗಳನ್ನು (ನಿಮ್ಮ ಸಹಿ ಹಾಗೂ ಸಂವೀಕ್ಷಕರ ಸಹಿಯೊಂದಿಗೆ) ನಿಗದಿಪಡಿಸಿರುವ ಸ್ಥಳದಲ್ಲಿ ಭರ್ತಿ/ಗುರುತು ಮಾಡಿರಿ.
8. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆ ಪುಸ್ತಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆಪುಸ್ತಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
9. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಉತ್ತರ ಪತ್ರಿಕೆಯ ಹಾಳೆಯಲ್ಲಿ ಇನ್ನಾವುದೇ ಗುರುತುಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಉತ್ತರ ಪತ್ರಿಕೆಯ ಹಾಳೆಯನ್ನು ತಮ್ಮ ವಶಕ್ಕೆ ತೆಗೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.
10. ಪ್ರಶ್ನೆಗಳು ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿರುತ್ತವೆ. ಕನ್ನಡ ಪ್ರಶ್ನೆಗಳಲ್ಲಿ ಸಂದೇಹ ಉಂಟಾದರೆ, ದಯವಿಟ್ಟು ಆಂಗ್ಲ ಭಾಷೆಯ ಪ್ರಶ್ನೆಗಳನ್ನು ಗಮನಿಸುವುದು.
11. ಯಾವುದೇ ರೀತಿಯ ಕ್ಯಾಲ್‌ಕ್ಯುಲೇಟರ್‌ಗಳನ್ನು ಬಳಸಲು **ಅನುಮತಿ ಇಲ್ಲ.**

---

**ಈ ಪ್ರಶ್ನೆಪುಸ್ತಿಕೆಯನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು.**

---

***Note :*** *English version of the instructions is printed on the back cover of this booklet.*

1. ಪಟ್ಟಿ-I ಮತ್ತು ಪಟ್ಟಿ-II ಸರಿಹೊಂದಿಸಿ ಹಾಗೂ ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಸರಿ ಉತ್ತರವನ್ನು ಆಯ್ಕೆ ಮಾಡಿ.

| ಪಟ್ಟಿ-I (ಸಂವಿಧಾನ) | ಪಟ್ಟಿ-II (ಅವಕಾಶ) |
|---|---|
| A. ರಾಜ್ಯ ನೀತಿಯ ನಿರ್ದೇಶಕ ತತ್ವಗಳು | (1) ಅನುಸೂಚಿತ ಪ್ರದೇಶಗಳು |
| B. ಮೂಲಭೂತ ಹಕ್ಕುಗಳು | (2) ಏಕರೂಪದ ಸಿವಿಲ್ ಸಂಹಿತೆ |
| C. ಮೂಲಭೂತ ಕರ್ತ್ಯವ್ಯಗಳು | (3) ಅಸ್ಪೃಶ್ಯತೆಯ ನಿರ್ಮೂಲನ |
| D. ಐದನೇ ಅನುಸೂಚಿ | (4) ರಾಷ್ಟ್ರಧ್ವಜಕ್ಕೆ ಗೌರವ |

ಸಂಕೇತಗಳು :

| | A | B | C | D |
|---|---|---|---|---|
| (1) | 1 | 4 | 3 | 2 |
| (2). | 2 | 3 | 4 | 1 |
| (3) | 4 | 2 | 3 | 1 |
| (4) | 2 | 4 | 3 | 1 |

2. ಈ ಕೆಳಗಿನ ಯಾವುದು ಭಾರತದ ಸಾಂವಿಧಾನಿಕ ಪ್ರಾಧಿಕಾರವಲ್ಲ ?
   (1) ಭಾರತದ ನಿಯಂತ್ರಕರು ಮತ್ತು ಮಹಾಲೇಖಪಾಲರು
   (2) ಪರಿಶಿಷ್ಟ ಜಾತಿಗಳವರ ರಾಷ್ಟ್ರೀಯ ಆಯೋಗ
   (3) ಕೇಂದ್ರ ಲೋಕ ಸೇವಾ ಆಯೋಗ
   (4) ಯೋಜನಾ ಆಯೋಗ

3. ಇದುವರೆಗೆ ಕಂಡು ಹಿಡಿಯಲಾಗಿರುವ ಅತ್ಯಂತ ಉತ್ತರ ಭಾಗದಲ್ಲಿರುವ ಹರಪ್ಪಾ ನಿವೇಶನ ಯಾವುದು ?
   (1) ಜಮ್ಮು ಮತ್ತು ಕಾಶ್ಮೀರದಲ್ಲಿರುವ ಮಾಂಡು
   (2) ಪಂಜಾಬ್‌ನಲ್ಲಿರುವ ರೋಪಾರ್
   (3) ಪಾಕಿಸ್ತಾನದಲ್ಲಿರುವ ಹರಪ್ಪಾ
   (4) ಉತ್ತರ ಪ್ರದೇಶದಲ್ಲಿರುವ ಅಲಂಗೀರ್‌ಪುರ

4. ಈ ಕೆಳಕಂಡ ಯಾವ ಕೃತಿಯು ಕರ್ನಾಟಕದ ಅನನ್ಯತೆಯನ್ನು ನಿರೂಪಿಸಿದೆ ?
   (1) ಕವಿರಾಜಮಾರ್ಗ
   (2) ಮಾನಸೋಲ್ಲಾಸ
   (3) ಕಾಲಕೇಯ ವಧ
   (4) ರಾಮಧಾನ್ಯ ಚರಿತೆ

5. ಅಶೋಕನ ಶಾಸನಗಳು ಕೆಳಕಂಡ ಲಿಪಿಯಲ್ಲಿವೆ.
   1. ಬ್ರಾಹ್ಮಿ 2. ಖರೋಷ್ಠಿ
   3. ಅರಾಮಿಕ್ 4. ಗ್ರೀಕ್
   ಇದರಲ್ಲಿ ಸರಿಯಾದ ಉತ್ತರಗಳ ಜೋಡಣೆಯನ್ನು ಗುರುತಿಸಿ
   (1) 1 ಮತ್ತು 2
   (2) 1, 2 ಮತ್ತು 3
   (3) 1, 2, 3 ಮತ್ತು 4
   (4) 1 ಮತ್ತು 3

6. ಪ್ರತಿಪಾದನೆ A : ಭಾರತದ ಸಂಸತ್ತಿನಲ್ಲಿ ಹಣದ ವಿಧೇಯಕವನ್ನು ರಾಜ್ಯಸಭೆಯಲ್ಲಿ ಮಂಡಿಸುವಂತಿಲ್ಲ.
   ಕಾರಣ R : ಒಂದು ವಿಧೇಯಕವು ಹಣದ ವಿಧೇಯಕವೇ ಅಲ್ಲವೇ ಎಂಬುದನ್ನು ಲೋಕಸಭೆಯ ಸ್ಪೀಕರ್‌ರವರು ನಿರ್ಧರಿಸಬೇಕು.
   (1) A ಮತ್ತು R ಎರಡೂ ಸರಿ ಮತ್ತು A ಗೆ R ಸರಿಯಾದ ಕಾರಣ.
   (2) A ಮತ್ತು R ಎರಡೂ ಸರಿ. ಆದರೆ A ಗೆ R ಸರಿಯಾದ ಕಾರಣವಲ್ಲ.
   (3) A ಸರಿಯಿದೆ. R ತಪ್ಪು.
   (4) A ತಪ್ಪಾಗಿದೆ. R ಸರಿ.

1. Match List – I and II and choose the correct matching from the code given below :

| List – I Constitution | List – II Provision |
|---|---|
| (A) Directive Principles of State Policy | (1) Scheduled Areas |
| (B) Fundamental Rights | (2) Uniform Civil Code |
| (C) Fundamental Duties | (3) Abolition of Untouchability |
| (D) Fifth Schedule | (4) Respect for National Flag |

**Codes :**

| | A | B | C | D |
|---|---|---|---|---|
| (1) | 1 | 4 | 3 | 2 |
| (2) | 2 | 3 | 4 | 1 |
| (3) | 4 | 2 | 3 | 1 |
| (4) | 2 | 4 | 3 | 1 |

2. The following is not a Constitutional authority in India :
   (1) Comptroller and Auditor General of India
   (2) National Commission for Scheduled Castes
   (3) Union Public Service Commission
   (4) Planning Commission

3. The northernmost Harappan site discovered so far is
   (1) Mandu in Jammu and Kashmir
   (2) Ropar in Punjab
   (3) Harappa in Pakistan
   (4) Alamgirpur in U.P.

4. Which of the following works defines an identity of Karnataka ?
   (1) Kavirajamarga
   (2) Manasollasa
   (3) Kalakeyavadha
   (4) Ramadhanyacharithe

5. Asokan inscriptions are found in the following scripts:
   1. Brahmi 2. Kharoshthi
   3. Aramaic 4. Greek
   Find out the right combination of answers.
   (1) 1 and 2 (2) 1, 2 and 3
   (3) 1, 2, 3 and 4 (4) 1 and 3

6. **Assertion (A)** : In the Indian Parliament a money bill cannot be introduced in the Rajya Sabha.
   **Reason (R)** : Whether a bill is a money bill or not is to be decided by the Speaker of the Lok Sabha.
   (1) Both (A) and (R) are right and (R) is the reason for (A).
   (2) Both (A) and (R) are right but (R) is not the reason for (A).
   (3) (A) is right but (R) is wrong.
   (4) (A) is wrong but (R) is right.

7. ಪ್ರಾಚೀನ ಚಾಲುಕ್ಯರ ಎರಡನೇ ರಾಜಧಾನಿಯಾಗಿದ್ದ ಬಾದಾಮಿಗೆ ಮೊದಲು ಈ ಹೆಸರಿತ್ತು
(1) ವಾತಾಪಿ
(2) ಐಹೊಳೆ
(3) ಬೇಲೂರು
(4) ಹಳೇಬೀಡು

8. ಕುತುಬ್ ಮೀನಾರ್ ಬಳಿ ಇರುವ ಪ್ರಸಿದ್ಧವಾದ ಉಕ್ಕಿನ ಸ್ತಂಭ ಯಾರಿಗೆ ಸೇರಿದ್ದು ?
(1) ಮೌರ್ಯರು
(2) ಗುಪ್ತರು
(3) ವರ್ಧನರು
(4) ಕುಶಾನರು

9. ಶ್ರೀರಂಗಪಟ್ಟಣದಲ್ಲಿ ನಡೆದ ನಾಲ್ಕನೇ ಮೈಸೂರು ಯುದ್ಧದಲ್ಲಿ ಸೋತು ಹತರಾದವರು ಯಾರು ?
(1) ಟಿಪ್ಪು ಸುಲ್ತಾನ್
(2) ಹೈದರಾಲಿ
(3) ನಿಜಾಮ್ ಉದ್‌ದೌಲ
(4) ಸೈಯ್ಯದ್ ಸೋದರರು

10. 1911 ರಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯನ್ನು ------ ರಲ್ಲಿ ಆರಂಭಿಸಲಾಯಿತು.
(1) ಮಂಗಳೂರು
(2) ಮೈಸೂರು
(3) ಬೆಂಗಳೂರು
(4) ಮುಂಬಯಿ

11. 70 ಅಡಿ ಎತ್ತರದ ಗೊಮ್ಮಟೇಶ್ವರ ಮೂರ್ತಿ ಎಲ್ಲಿದೆ ?
(1) ಧರ್ಮಸ್ಥಳ
(2) ಶ್ರವಣಬೆಳಗೊಳ
(3) ಕಾರ್ಕಳ
(4) ಮೂಡುಬಿದರೆ

12. ಎರಡನೇ ದುಂಡು ಮೇಜಿನ ಪರಿಷತ್ತಿನಲ್ಲಿ ಭಾರತದ ಕಾರ್ಮಿಕರನ್ನು ಪ್ರತಿನಿಧಿಸಿದಂಥ ನಾಯಕ
(1) ನೀಲಂ ಸಂಜೀವ ರೆಡ್ಡಿ
(2) ವಿ. ವಿ. ಗಿರಿ
(3) ಜವಹರಲಾಲ್ ನೆಹರೂ
(4) ಜಕೀರ್ ಹುಸೇನ್

13. 'ಕವಿರಾಜಮಾರ್ಗ' ಯಾರ ಕಾಲಕ್ಕೆ ಸೇರಿದ್ದೆಂದು ಹೇಳಲಾಗುತ್ತದೆ ?
(1) ಒಂದನೇ ಕೃಷ್ಣ
(2) ಎರಡನೇ ಗೋವಿಂದ
(3) ಒಂದನೇ ಅಮೋಘ ವರ್ಷ
(4) ಧ್ರುವ

14. ಅದ್ವೈತ ತತ್ವ ಸಿದ್ಧಾಂತವನ್ನು ಪ್ರತಿಪಾದಿಸಿದವರು
(1) ರಾಮಾನುಜಾಚಾರ್ಯ
(2) ಮಧ್ವಾಚಾರ್ಯ
(3) ಶಂಕರಾಚಾರ್ಯ
(4) ಯಮುನಾಚಾರ್ಯ

15. ಜಸ್ಟಿಸ್ ಮಿಲರ್ ಸಮಿತಿಯು ಯಾವುದರ ಬಗ್ಗೆ ವರದಿ ಸಲ್ಲಿಸಬೇಕಾಗಿತ್ತು ?
(1) ಸಂವಿಧಾನಾತ್ಮಕ ಸುಧಾರಣೆಗಳು
(2) ಗಣಪತಿ ಹಬ್ಬದ ಗಲಭೆಗಳು
(3) ಹಿಂದುಳಿದ ವರ್ಗದವರಿಗೆ ಮೀಸಲಾತಿ
(4) ವಿಧುರಾಶ್ವತ್ಥ ದುರಂತ

16. ಈ ಕೆಳಗಿನ ಯಾವುದು ಭಾರತದ ರಾಷ್ಟ್ರೀಯ ಲಾಂಛನವಾಗಿದೆ ?
(1) ಸಾಂಚಿಯ ಸಿಂಹದ ಶಿರೋಭಾಗ
(2) ರೂಪಾರ್‌ನ ಸಿಂಹದ ಶಿರೋಭಾಗ
(3) ಸಾರನಾಥ್ ಸಿಂಹದ ಶಿರೋಭಾಗ
(4) ಅಲಹಾಬಾದ್ ಕಂಬದ ಶಿರೋಭಾಗ

7. Badami, the second capital of the early Chalukyas was formerly known as
   (1) Vatapi
   (2) Aihole
   (3) Belur
   (4) Halebid

8. The famous Iron Pillar near Qutab-Minar belongs to
   (1) Mauryas
   (2) Guptas
   (3) Vardhanas
   (4) Kushanas

9. Who was defeated and killed in the Fourth Mysore war at Srirangapattanam ?
   (1) Tippu Sultan
   (2) Hyder Ali
   (3) Nizam-ud-daula
   (4) Syyad Brothers

10. Indian Institute of Science in 1911 was started at
   (1) Mangalore
   (2) Mysore
   (3) Bangalore
   (4) Mumbai

11. 70 feet high idol of Gomateshwara is in
   (1) Dharmasthala
   (2) Sravanabelgola
   (3) Karkala
   (4) Moodbidri

12. The leader who represented Indian labour at the Second Round Table Conference was
   (1) Neelam Sanjiva Reddy
   (2) V V Giri
   (3) Jawaharlal Nehru
   (4) Zakir Hussain

13. 'Kavirajamarga' is ascribed to the times of
   (1) Krishna I
   (2) Govinda II
   (3) Amoghavarsha I
   (4) Dhruva

14. Advaita Philosophy was propounded by
   (1) Ramanujacharya
   (2) Madhvacharya
   (3) Shankaracharya
   (4) Yamunacharya

15. Justice Miller Committee was to report on
   (1) Constitutional Reforms.
   (2) Ganapathi Disturbances.
   (3) Reservation for Backward Classes.
   (4) Vidhurashwatha Tragedy.

16. Which of the following is the National emblem of India ?
   (1) Sanchi Lion Capital
   (2) Rupar Lion Capital
   (3) Sarnath Lion Capital
   (4) Allahabad Pillar Capital

17. ಈ ಕೆಳಗಿನ ವಿವರಣೆಗಳನ್ನು ಪರಿಶೀಲಿಸಿ.

(A) 2001 ರಲ್ಲಿ ಭಾರತದ ಜನಸಂಖ್ಯೆಯ ಬೆಳವಣಿಗೆ ದರವು ಪ್ರತಿವರ್ಷಕ್ಕೆ 1.95% ರಷ್ಟಿತ್ತು.

(B) ಆಗ ಚೀನಾದ ದರವು 1.8% ಇತ್ತು, ಮತ್ತು

(C) ಜಗತ್ತಿನ ಸರಾಸರಿ ಬೆಳವಣಿಗೆ ದರವು ಪ್ರತಿವರ್ಷಕ್ಕೆ 1.8% ರಷ್ಟಿತ್ತು.

ಇವುಗಳಲ್ಲಿ ಯಾವುದು ಸರಿಯಾಗಿದೆ ?

(1) A ಮಾತ್ರ
(2) B ಮಾತ್ರ
(3) A ಮತ್ತು B ಮಾತ್ರ
(4) A, B ಮತ್ತು C

18. ಪ್ಯಾರಾದೀಪ್ ಬಂದರಿನಿಂದ ರಫ್ತಾಗುವ ಪ್ರಧಾನ ಪದಾರ್ಥಗಳ ಜೋಡಿ ಯಾವುದು ?

(1) ಉಕ್ಕಿನ ಉತ್ಪನ್ನಗಳು ಮತ್ತು ಜವಳಿ (ಹತ್ತಿ)
(2) ಕಬ್ಬಿಣದ ಅದಿರು ಮತ್ತು ಮ್ಯಾಂಗನೀಸ್
(3) ಸಕ್ಕರೆ, ರತ್ನಗಳು ಹಾಗೂ ಆಭರಣಗಳು
(4) ಅಕ್ಕಿ ಮತ್ತು ಸಾಂಬಾರ ಪದಾರ್ಥಗಳು.

19. ಅಘನಾಶಿನಿ ಮತ್ತು ಶರಾವತಿ ನದಿಗಳ ಮಧ್ಯೆ ಇರುವ ಪಟ್ಟಣಗಳ ಜೋಡಿ ಯಾವುದು ?

(1) ಕಾರವಾರ ಮತ್ತು ಗೋಕರ್ಣ
(2) ಕುಮಟಾ ಮತ್ತು ಹೊನ್ನಾವರ
(3) ಹೊನ್ನಾವರ ಮತ್ತು ಭಟ್ಕಳ
(4) ಭಟ್ಕಳ ಮತ್ತು ಮಲ್ಪೆ

20. ಈ ಕೆಳಕಂಡವರ ವರದಿಯನ್ನು ಆಧರಿಸಿ 1956 ರಲ್ಲಿ ಕರ್ನಾಟಕದ ರಚನೆಯಾಯಿತು.

(1) ಜೆವಿಪಿ ಸಮಿತಿ
(2) ವಾಂಚೂ ಸಮಿತಿ
(3) ಫಜಲ್ ಅಲಿ ಆಯೋಗ
(4) ಎಸ್. ಕೆ. ಧರ್ ಸಮಿತಿ

21. ದಕ್ಷಿಣ ಗೋಲಾರ್ಧದಲ್ಲಿ ಅತ್ಯಂತ ದೀರ್ಘವಾದ ಹಗಲು ಇರುವ ದಿನ

(1) ಜೂನ್ 21
(2) ಮಾರ್ಚ್ 21
(3) ಸೆಪ್ಟೆಂಬರ್ 23
(4) ಡಿಸೆಂಬರ್ 22

22. ಮ್ಯಾನ್‌ಮಾರ್ ಮತ್ತು ಬಂಗ್ಲಾದೇಶದೊಂದಿಗೆ ಅಂತರರಾಷ್ಟ್ರೀಯ ಗಡಿರೇಖೆಯನ್ನು ಹೊಂದಿರುವ ರಾಜ್ಯ

(1) ತ್ರಿಪುರ
(2) ಮಿಜೋರಾಂ
(3) ಮಣಿಪುರ
(4) ಒರಿಸ್ಸಾ

23. ಬೆಳ್ಳಿಯು ಸಮೃದ್ಧವಾಗಿ ಸಿಗುವಂಥ ರಾಜ್ಯ

(1) ರಾಜಸ್ಥಾನ
(2) ಗುಜರಾತ
(3) ಕರ್ನಾಟಕ
(4) ಮಧ್ಯ ಪ್ರದೇಶ

24. ಪ್ರಾಣಿಗಳು, ಸಸ್ಯಗಳು ಮತ್ತು ಇನ್ನಿತರ ಸೂಕ್ಷ್ಮಜೀವಿಗಳ ಪಳೆಯುಳಿಕೆಗಳು ಯಾವ ಶಿಲೆಗಳಲ್ಲಿ ಕಂಡು ಬರುತ್ತವೆ ?

(1) ಪ್ಲುಟಾನಿಕ್ ಶಿಲೆಗಳು
(2) ಜಲಜ ಶಿಲೆಗಳು
(3) ರೂಪಾಂತರಿತ ಶಿಲೆಗಳು
(4) ಅಗ್ನಿ ಶಿಲೆಗಳು

25. ಕರ್ನಾಟಕದಲ್ಲಿ ಲ್ಯಾಟರೈಟ್ ಮಣ್ಣಿನ ಬೃಹತ್ ಪ್ರದೇಶ ಹೊಂದಿರುವಂಥ ಜಿಲ್ಲೆಗಳ ಸರಿಯಾದ ಅನುಕ್ರಮಣಿಕೆ ಕೆಳಕಂಡಂತೆ ಇದೆ.

(1) ಬಿಜಾಪುರ – ಬಾಗಲಕೋಟೆ – ಬೀದರ್
(2) ಗುಲ್ಬರ್ಗ - ಯಾದಗಿರ್ - ರಾಯಚೂರು
(3) ಶಿವಮೊಗ್ಗ - ಚಿತ್ರದುರ್ಗ - ಕೊಪ್ಪಳ
(4) ಕೊಡಗು – ದಕ್ಷಿಣ ಕನ್ನಡ - ಉಡುಪಿ

**17.** Consider the following statements :

(A) In 2001 India had a Population growth rate of 1.95% per annum.

(B) Then China had 1.8% and

(C) World's average growth rate was 1.8% per annum.

Which of the following is correct ?

(1) Only A.

(2) Only B.

(3) A and B only.

(4) A, B and C.

**18.** Pair of dominant items exported from Paradeep port is

(1) Steel products and Cotton textiles

(2) Iron Ore and Manganese

(3) Sugar, Jems & Jewellery

(4) Rice and Spices

**19.** Pair of towns which lie between rivers Aganashini and Sharavathi is

(1) Karwar and Gokarna

(2) Kumta and Honnavara

(3) Honnavara and Bhatkal

(4) Bhatkal and Malpe.

**20.** Karnataka was formed in 1956 on the basis of the report of

(1) JVP Committee

(2) Wanchoo Committee

(3) Fazal Ali Commission

(4) S.K. Dhar Committee

**21.** The longest day in Southern Hemisphere is

(1) June 21

(2) March 21

(3) September 23

(4) December 22

**22.** Which of the following States has international boundary with Myanmar and Bangladesh ?

(1) Tripura

(2) Mizoram

(3) Manipur

(4) Orissa

**23.** Silver is most abundantly found in the State of

(1) Rajasthan

(2) Gujarat

(3) Karnataka

(4) Madhya Pradesh

**24.** Fossils of animals, plants and other micro-organisms are found in

(1) Plutonic rocks

(2) Sedimentary rocks

(3) Metamorphic rocks

(4) Igneous rocks

**25.** Correct sequence of districts which have large areas of laterite soils in Karnataka is

(1) Bijapur – Bagalkot - Bidar

(2) Gulbarga – Yadgir – Raichur

(3) Shimoga – Chitradurga – Koppala

(4) Kodagu – Dakshina Kannada – Udupi

26. ಗುಡುಗು ಬಿರುಗಾಳಿ ರೂಪುಗೊಳ್ಳುವಲ್ಲಿ ಬಹು ಮುಖ್ಯವಾದ ಅಂಶ

(1) ವಾತಾವರಣದ ಸ್ಥಿರತೆ

(2) ಉಷ್ಣಾಂಶದ ಪ್ರತಿಲೋಮನ

(3) ಕೆಳಗಿನ ಸ್ತರಗಳಲ್ಲಿ ಸಮೃದ್ಧವಾದ ತೇವಾಂಶ

(4) ವಾತಾವರಣದ ಅಸ್ಥಿರತೆ

27. ಗಾಳಿಯ ವೇಲಾಸಿಟಿಯನ್ನು ಯಾವುದರಿಂದ ಅಳೆಯುತ್ತಾರೆ ?

(1) ಥರ್ಮಾಮೀಟರ್

(2) ಅನಿಮಾ ಮೀಟರ್

(3) ಬಾರೊಮೀಟರ್

(4) ಹೈಗ್ರೊ ಮೀಟರ್

28. ಮೆಕ್ಕೆ ಜೋಳವನ್ನು ಅತಿ ಹೆಚ್ಚು ಉತ್ಪಾದಿಸುವ ರಾಜ್ಯ

(1) ಪಂಜಾಬ್

(2) ಉತ್ತರ ಪ್ರದೇಶ

(3) ಕೇರಳ

(4) ರಾಜಸ್ಥಾನ

29. ಕೊಂಕಣ ರೈಲ್ವೆಯು ಈ ಕೆಳಕಂಡ ಎರಡು ಸ್ಥಳಗಳಿಗೆ ಸಂಪರ್ಕ ಕಲ್ಪಿಸುತ್ತದೆ

(1) ಮಂಗಳೂರು ಮತ್ತು ಪಣಜಿ

(2) ಪಣಜಿ ಮತ್ತು ಮುಂಬೈ

(3) ಮುಂಬೈ ಮತ್ತು ಮಂಗಳೂರು

(4) ಪುಣೆ ಮತ್ತು ಮಂಗಳೂರು

30. ಕಾಂಗ್ರಾ ಕಣಿವೆ ಎಲ್ಲಿದೆ ?

(1) ಹರಿಯಾಣ

(2) ಹಿಮಾಚಲ ಪ್ರದೇಶ

(3) ಪಂಜಾಬ್

(4) ಜಮ್ಮು ಮತ್ತು ಕಾಶ್ಮೀರ

31. ಪ್ರತಿಪಾದನೆ A : ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ, ಭಾರತ ಉಪಖಂಡ ಮತ್ತು ವೆಸ್ಟ್ ಇಂಡೀಸ್‌ಗಳಲ್ಲಿ ಕ್ರಿಕೆಟ್ ಬಹಳ ಜನಪ್ರಿಯ ವಾಗಿದೆ.

ಕಾರಣ R : ಬ್ರಿಟಿಷ್ ವಸಾಹತು ನೆಲೆಸುವಿಕೆಯ ಮೂಲಕ ಈ ದೇಶಗಳಿಗೆ ಕ್ರಿಕೆಟ್ ಹಬ್ಬಿತು.

ಈ ಕೆಳಕಂಡವುಗಳಿಂದ ಸರಿಯಾದ ಉತ್ತರ ಆಯ್ಕೆ ಮಾಡಿ.

(1) A ಮತ್ತು R ಸರಿಇವೆ ಹಾಗೂ A ಗೆ R ಸರಿಯಾದ ಕಾರಣ.

(2) A ಮತ್ತು R ಎರಡೂ ಸರಿಇವೆ ಆದರೆ A ಗೆ R ಸರಿಯಾದ ಕಾರಣವಲ್ಲ.

(3) A ಸರಿ ಇದೆ. R ತಪ್ಪು.

(4) A ತಪ್ಪಾಗಿದೆ. R ಸರಿ.

32. 1973 ರ ಭದ್ರತಾ ಮಂಡಳಿಯ ನಿರ್ಣಯವು ನಾಗರಿಕರನ್ನು ರಕ್ಷಿಸುವುದಕ್ಕಾಗಿ "ಎಲ್ಲ ಅಗತ್ಯ ಕ್ರಮಗಳನ್ನು ಕೈಗೊಳ್ಳುವ" ಅಧಿಕಾರವನ್ನು ನೀಡಿ 2011 ರ ಮಾರ್ಚ್‌ನಲ್ಲಿ ಲಿಬಿಯಾದ ಮೇಲೆ 'No – fly zone' ಎಂಬ ನಿರ್ಣಯವನ್ನು ಅನುಮೋದಿಸಿತು. ಈ ನಿರ್ಣಯದ ಪರವಾಗಿ 10 ಮತಗಳು ಬಂದವು, ಇದನ್ನು ವಿರೋಧಿಸಿ ಯಾವ ಮತವೂ ಇರಲಿಲ್ಲ ಮತ್ತು 5 ವರ್ಜನೆಯವಾಗಿದ್ದವು. (Abstentions) ವರ್ಜನೆಗಳು ಬಂದಿದ್ದು ಕೆಳಕಂಡ ದೇಶಗಳಿಂದ

(1) ಕೋಲಂಬಿಯಾ, ಪೋರ್ಚುಗಾಲ, ಭಾರತ, ಜರ್ಮನಿ, ದಕ್ಷಿಣ ಆಫ್ರಿಕಾ

(2) ಚೀನಾ, ರಶಿಯಾ, ಭಾರತ, ಫ್ರಾನ್ಸ್, ಕೋಲಂಬಿಯಾ,

(3) ದಕ್ಷಿಣ ಆಫ್ರಿಕಾ, ಪೋರ್ಚುಗಾಲ, ಫ್ರಾನ್ಸ್, ಜರ್ಮನಿ, ಬ್ರಝಿಲ್

(4) ಬ್ರಝಿಲ್, ಜರ್ಮನಿ, ಚೀನಾ, ಭಾರತ, ರಶಿಯನ್ ಫೆಡರೇಶನ್

33. ಭಾರತದ ಒಟ್ಟು ಭೌಗೋಳಿಕ ವಿಸ್ತೀರ್ಣದಲ್ಲಿ ಕರ್ನಾಟಕದ ಪಾಲು ಎಷ್ಟಿದೆ ?

(1) ಶೇಕಡಾ 5. 85 (2) ಶೇಕಡಾ 6.35

(3) ಶೇಕಡಾ 8.36 (4) ಶೇಕಡಾ 3.53

**26.** The most important factor in thunder storm development is

(1) Atmospheric stability

(2) Temperature inversion

(3) Abundance of moisture in lower layers

(4) Atmospheric instability

**27.** The velocity of the wind is measured by

(1) Thermometer

(2) Anemometer

(3) Barometer

(4) Hygrometer

**28.** Which State is the leading producer of Maize ?

(1) Punjab

(2) Uttar Pradesh

(3) Kerala

(4) Rajasthan

**29.** Konkan Railway connects these two places :

(1) Mangalore and Panaji

(2) Panaji and Mumbai

(3) Mumbai and Mangalore

(4) Pune and Mangalore

**30.** Kangra valley is situated in

(1) Haryana

(2) Himachal Pradesh

(3) Punjab

(4) Jammu and Kashmir

**31.** **Assertion A:** Cricket is popular in Australia, South Africa, Indian Sub-continent and West Indies.

**Reason R :** The game spread to these countries with British colonial settlement.

Choose your answer from any one of the following :

(1) A and R are right and R is the reason for A.

(2) A and R are both right but R is not the reason for A.

(3) A is right but R is wrong.

(4) A is wrong but R is right.

**32.** The Security Council Resolution 1973 approved a 'No-Fly Zone' over Libya in March 2011, authorizing 'All Necessary Measures' to protect civilians by a vote of 10 in favour, none against, and 5 abstentions. The 5 abstentions were from

(1) Columbia, Portugal, India, Germany, South Africa

(2) China, Russia, India, France, Columbia

(3) South Africa, Portugal, France, Germany, Brazil

(4) Brazil, China, Germany, India, Russian Federation

**33.** Karnataka's share in the total geographical area of India is

(1) 5.85 percent

(2) 6.35 percent

(3) 8.36 percent

(4) 3.53 percent

34. ಪ್ರಧಾನ ಮಂತ್ರಿ ಮನಮೋಹನ್ ಸಿಂಗ್ ಅವರು ಚುನಾಯಿತ ರಾಜ್ಯ ಸಭಾ ಸದಸ್ಯರಾಗಿದ್ದು, ಅವರು ಯಾವ ರಾಜ್ಯದಿಂದ ಚುನಾಯಿತರಾಗಿದ್ದಾರೆ ?
(1) ಪಂಜಾಬ್
(2) ಉತ್ತರ ಪ್ರದೇಶ
(3) ಅಸ್ಸಾಂ
(4) ಹಿಮಾಚಲ ಪ್ರದೇಶ

35. ಮಣಿಪುರದ ಅಧಿಕೃತ ಭಾಷೆ ಯಾವುದು ?
(1) ಮಣಿಪುರಿ
(2) ಇಂಗ್ಲಿಷ್
(3) ಮೈತಿಲಾನ್
(4) ಹಿಂದಿ

36. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ(NREGA)ವನ್ನು ಮೊತ್ತ ಮೊದಲಿಗೆ ಜಾರಿಗೆ ತಂದ ಸಮ್ಮಿಶ್ರ ಸರ್ಕಾರ ಯಾವುದು ?
(1) ದಿ ನ್ಯಾಶನಲ್ ಫ್ರಂಟ್ – 1989-1990
(2) ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿಕೂಟ (NDA), 1999-2004
(3) ಯುನೈಟೆಡ್ ಪ್ರೊಗ್ರೆಸಿವ್ ಮೈತ್ರಿಕೂಟ (UPA)-I 2004-2009
(4) ಯುನೈಟೆಡ್ ಪ್ರೊಗ್ರೆಸಿವ್ ಮೈತ್ರಿಕೂಟ (UPA)-II 2009-

37. ಪ್ರಮುಖವಾದ ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಗೆಲ್ಲುವ ಮೂಲಕ ಸೈನಾ ನೆಹ್ವಾಲ್ ಅವರು ಇಂತಹ ಗೆಲುವಿನ ಮೊತ್ತ ಮೊದಲ ಭಾರತೀಯ ಮಹಿಳೆಯಾಗಿ 2009ರ ಜೂನ್ 21 ರಂದು ಇತಿಹಾಸ ನಿರ್ಮಿಸಿದರು. ಆ ಪಂದ್ಯಾವಳಿ ಯಾವುದು ?
(1) ಚೈನಾ ಮಾಸ್ಟರ್ಸ್ ಸೂಪರ್ ಸೀರೀಸ್
(2) ಆಲ್ ಇಂಗ್ಲೆಂಡ್ ಸೂಪರ್ ಸೀರೀಸ್
(3) ಸಿಂಗಾಪುರ್ ಸೂಪರ್ ಸೀರೀಸ್
(4) ಇಂಡೋನೇಶಿಯನ್ ಓಪನ್ ಸೂಪರ್ ಸೀರೀಸ್

38. ಇವುಗಳಲ್ಲಿ ಯಾವುದು ತಪ್ಪು ಹೊಂದಾಣಿಕೆ ಎಂಬುದನ್ನು ಗುರುತಿಸಿ.

| | ದೇವಾಲಯ | ಪಟ್ಟಣ |
|---|---|---|
| (1) | ಮೀನಾಕ್ಷಿ | ಮದುರೈ |
| (2) | ವಿಶ್ವನಾಥ | ಕಾಶಿ |
| (3) | ಜಗನ್ನಾಥ | ಪುರಿ |
| (4) | ವಿಠೋಬಾ | ಪುಣೆ |

39. ದಕ್ಷಿಣ ಏಷಿಯಾದ ಈ ಕೆಳಕಂಡ ದೇಶ/ದೇಶಗಳಲ್ಲಿ ಜನಪ್ರಿಯರಾಗಿ ಚುನಾಯಿತ-ರಾದ ಮಹಿಳೆಯರು ಸರ್ಕಾರದ ನೇತೃತ್ವ ವಹಿಸಿದ್ದರು.
a. ಭಾರತ
b. ಶ್ರೀಲಂಕಾ
c. ಬಂಗ್ಲಾದೇಶ
d. ಪಾಕಿಸ್ತಾನ

ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಸರಿ ಉತ್ತರವನ್ನು ಆಯ್ಕೆ ಮಾಡಿ.
(1) a, b, c ಮತ್ತು d ಸರಿಯಾಗಿವೆ.
(2) a, b ಮತ್ತು c ಸರಿಯಾಗಿವೆ.
(3) a ಮತ್ತು b ಸರಿಯಾಗಿವೆ.
(4) a ಮಾತ್ರ ಸರಿ ಇದೆ.

40. ಇವುಗಳಲ್ಲಿ ಯಾವುದು ತಪ್ಪು ಹೊಂದಾಣಿಕೆ ಎಂಬುದನ್ನು ಗುರುತಿಸಿ.

| | ನದಿ | ದೇಶ |
|---|---|---|
| (1) | ಯಾಂಗ್‌ತ್ಸೆ | ಚೀನಾ |
| (2) | ವೋಲ್ಗಾ | ರಷ್ಯಾ |
| (3) | ಡ್ಯಾನ್ಯೂಬ್ | ಸ್ವಿಟ್ಜರ್‌ಲ್ಯಾಂಡ್ |
| (4) | ಯುಫ್ರೇಟಿಸ್ | ಟರ್ಕಿ |

**34.** Prime Minister Manmohan Singh is an elected Rajya Sabha Member from which State ?

(1) Punjab

(2) Uttar Pradesh

(3) Assam

(4) Himachal Pradesh

**35.** What is the official language of Manipur called ?

(1) Manipuri

(2) English

(3) Meiteilon

(4) Hindi

**36.** The National Rural Employment Guarantee Act (NREGA) was first passed by the following Coalition Government.

(1) The National Front, 1989-1990.

(2) National Democratic Alliance, 1999-2004.

(3) United Progressive Alliance I, 2004-2009.

(4) United Progressive Alliance II, 2009-

**37.** Saina Nehwal made history on June 21, 2009 by becoming the first Indian woman to win which major badminton tournament ?

(1) China Masters Super Series

(2) All England Super Series

(3) Singapore Super Series

(4) Indonesian Open Super Series

**38.** Which of the following is not correctly matched ?

| | **Temple** | **Town** |
|---|---|---|
| (1) | Meenakshi | Madurai |
| (2) | Vishwanath | Kashi |
| (3) | Jagannath | Puri |
| (4) | Vithoba | Pune |

**39.** In the following country/ countries of South Asia, we have had popularly elected women as heads of government :

(a) India

(b) Sri Lanka

(c) Bangladesh

(d) Pakistan

Choose your correct answer from the code given below :

(1) a, b, c and d are correct.

(2) a, b and c are correct.

(3) a and b are correct.

(4) a only is correct.

**40.** Identify the incorrect combination.

| | **River** | **Country** |
|---|---|---|
| (1) | Yangtze | China |
| (2) | Volga | Russia |
| (3) | Danube | Switzerland |
| (4) | Euphrates | Turkey |

41. ಭಾರತದಲ್ಲಿ ಮುಸ್ಲಿಮರ ಅಭಿವೃದ್ಧಿಯ ಸಾಪೇಕ್ಷ ಸ್ಥಿತಿ ಕುರಿತಂತೆ ತನಿಖೆ ನಡೆಸಿದ ಆಯೋಗ/ ಸಮಿತಿ ಯಾವುದು ?

(1) ಜಸ್ಟಿಸ್ ರಂಗನಾಥ ಮಿಶ್ರ
(2) ಜಸ್ಟಿಸ್ ರಾಜೇಂದ್ರ ಸಾಚಾರ್
(3) ಜಸ್ಟಿಸ್ ಚಿನ್ನಪ್ಪ ರೆಡ್ಡಿ
(4) ಜಸ್ಟಿಸ್ ಸೋಮ ಶೇಖರ್

42. 2011ರ ಹುಲಿಗಳ ಸಂಖ್ಯಾಗಣತಿಯ ಪ್ರಕಾರ ಹುಲಿಗಳ ಸಂಖ್ಯೆ ಅತ್ಯಂತ ಹೆಚ್ಚಾಗಿರುವ ರಾಜ್ಯ ಯಾವುದು ?

(1) ಗುಜರಾತ
(2) ಪಶ್ಚಿಮ ಬಂಗಾಳ
(3) ಕರ್ನಾಟಕ
(4) ಮಧ್ಯ ಪ್ರದೇಶ

43. 1 ಮತ್ತು 2 ಸರಿ ಹೊಂದಿಸಿ ಕೆಳಗೆ ಕೊಟ್ಟಿರುವ ಸಂಕೇತಗಳಿಂದ ಸರಿ ಉತ್ತರವನ್ನು ಆಯ್ಕೆಮಾಡಿ.

| ಪಟ್ಟಿ-1 ಲೇಖಕರು | ಪಟ್ಟಿ-2 ಕೃತಿಗಳು |
|---|---|
| A. ಸಲ್ಮಾನ್ ರಷ್ದೀ | 1. The God of Small Things |
| B. ವಿಕ್ರಮ ಸೇಠ್ | 2. The White Tiger |
| C. ಅರವಿಂದ ಅಡಿಗ | 3. A Suitable Boy |
| D. ಅರುಂಧತಿ ರಾಯ್ | 4. Satanic Verses |

| | A | B | C | D |
|---|---|---|---|---|
| (1) | 4 | 3 | 2 | 1 |
| (2) | 2 | 3 | 1 | 4 |
| (3) | 3 | 4 | 2 | 1 |
| (4) | 1 | 2 | 3 | 4 |

44. ವಿಶ್ವದ ನಂ. 2 ರ ಸ್ಥಾನವನ್ನು ಗಳಿಸುವುದಕ್ಕಾಗಿ ಫೆಡರರ್‌ನನ್ನು ಸೋಲಿಸಿದ ಆಟಗಾರ ಯಾರು?

(1) ರಾಬಿನ್ ಸೊಡರ್ಲಿಂಗ್
(2) ರೊಲ್ಯಾಂಡ್ ಗ್ಯಾರೋಸ್
(3) ನೆವ್ರೋಕ್ ಜೊಕೊವ್ರಿಕ್
(4) ಡೇವಿಡ್ ಫೆಸರ್

45. 2011ರ ವಿಶ್ವ ಕಪ್ ಕ್ರಿಕೆಟ್‌ನಲ್ಲಿ ಯುವರಾಜ್ ಸಿಂಗ್ ಅವರು ಎಷ್ಟು ಸಲ ಪಂದ್ಯ ಶ್ರೇಷ್ಠನಾಗಿ ಘೋಷಿಸಲ್ಪಟ್ಟರು ?

(1) 2
(2) 4
(3) 3
(4) 5

46. ಇತ್ತೀಚೆಗೆ ಕೊಲೆಯಾದ ಪಾಕಿಸ್ತಾನದ ಏಕೈಕ ಕ್ರಿಶ್ಚಿಯನ್ ಸಂಪುಟ ಸಚಿವರ ಹೆಸರೇನು ?

(1) ಶಹಬಾಜ್ ಭಟ್ಟಿ
(2) ತಾಸೀರ್ ಭಟ್ಟಿ
(3) ಅಸಿಯಾ ಬೀಬಿ
(4) ಜಫಾರ್ ಮಾಸೀಹ್

47. ರಾಷ್ಟ್ರೀಯ ತನಿಖಾ ಏಜೆನ್ಸಿಯ ಇತ್ತೀಚಿನ ವರದಿಯ ಪ್ರಕಾರ ಪಾಕಿಸ್ತಾನದ ಉಗ್ರಗಾಮಿ ಸಂಘಟನೆ ಲಷ್ಕರ್-ಇ-ತೊಯ್ಬಾ (LeT) ಯಾವ ಪ್ರದೇಶದ ಯುವಕರನ್ನು ಸೇರ್ಪಡೆ ಮಾಡಿಕೊಳ್ಳುತ್ತಿದೆ ?

(1) ಪಶ್ಚಿಮ ಬಂಗಾಳ
(2) ಆಂಧ್ರ ಪ್ರದೇಶ
(3) ಉತ್ತರ ಪ್ರದೇಶ
(4) ಕೇರಳ

48. ಅತ್ಯಂತ ಕಡಿಮೆ ಭ್ರಷ್ಟಾಚಾರ ಇರುವಂಥ ದೇಶ

(1) ಫಿನ್ಲೆಂಡ್
(2) ನ್ಯೂಜಿಲೆಂಡ್
(3) ಸಿಂಗಾಪುರ್
(4) ಡೆನ್ಮಾರ್ಕ್

41. Which one of the following Commission/Committee probed into relative condition of development of Muslims in India ?
   (1) Justice Ranganath Misra
   (2) Justice Rajinder Sachar
   (3) Justice Chinnappa Reddy
   (4) Justice Somsekhar

42. According to 2011 Tiger census, the State with highest tiger population is
   (1) Gujarat
   (2) West Bengal
   (3) Karnataka
   (4) Madhya Pradesh

43. Match 1 and 2 and identify the correct answer from the code given below :

| List – 1 Authors | List – 2 Books |
|---|---|
| A. Salman Rushdie | 1. The God of Small Things |
| B. Vikram Seth | 2. The White Tiger |
| C. Aravind Adiga | 3. A Suitable Boy |
| D. Arundhati Roy | 4. Satanic Verses |

| | A | B | C | D |
|---|---|---|---|---|
| (1) | 4 | 3 | 2 | 1 |
| (2) | 2 | 3 | 1 | 4 |
| (3) | 3 | 4 | 2 | 1 |
| (4) | 1 | 2 | 3 | 4 |

44. The player who beat Federer to occupy the world no. 2 position is
   (1) Robin Soderling
   (2) Rolland Garros
   (3) Nevok Djokovric
   (4) David Fesser

45. In the world cup cricket 2011, number of times Yuvraj Singh declared Man of the Match is
   (1) 2 (2) 4
   (3) 3 (4) 5

46. Pakistan's only Christian Cabinet Minister killed recently is
   (1) Shahbaz Bhatti
   (2) Taseer Bhatti
   (3) Asia Bibi
   (4) Zafar Masih

47. According to National Investigation Agency's latest report, Pakistan's terror outfit Lashkar-e-Toiba (LeT) is recruiting youths from
   (1) West Bengal
   (2) Andhra Pradesh
   (3) Uttar Pradesh
   (4) Kerala

48. The least corrupt nation in the world
   (1) Finland
   (2) New Zealand
   (3) Singapore
   (4) Denmark

**49.** ವಿಶ್ವ ನೀರಿನ ದಿನ ಎಂದು ಆಚರಿಸಲಾಗುವ ದಿನಾಂಕ

(1) ಮಾರ್ಚ್ 23

(2) ಮಾರ್ಚ್ 26

(3) ಮಾರ್ಚ್ 22

(4) ಮಾರ್ಚ್ 19

**50.** ಇತ್ತೀಚೆಗೆ ಕ್ಯಾನ್ಸರ್‌ನಿಂದ ನಿಧನರಾದ ಹಾಲಿವುಡ್‌ನ ಜನಪ್ರಿಯ ತಾರಾಮಣಿ

(1) ಸೋಫಿಯಾ ಲಾರೆನ್

(2) ಮರ್ಲಿನ್ ಮನ್ರೊ

(3) ಎಲಿಜಬೆತ್ ಟೇಲರ್

(4) ಮೇರಿ ಡಗ್ಲಾಸ್

**51.** ವಿಕಿ ಲೀಕ್ಸ್‌ನ ಪ್ರಧಾನ ಸಂಪಾದಕರ ಹೆಸರು

(1) ಜೂಲಿಯನ್ ಅಸಾಂಜೆ

(2) ಬಾಬ್ ಹ್ಯಾಂಕ್ಸ್

(3) ಕ್ರಿಸ್ಟೋಫರ್ ಲೀ

(4) ಡೇವ್ ಬಾರ್ಬರ್

**52.** ವಿನಾಶಕಾರಿ ಸುನಾಮಿಯು ಜಪಾನಿನ ಮೇಲೆ ಅಪ್ಪಳಿಸಿದ ದಿನಾಂಕ

(1) ಮಾರ್ಚ್ 9

(2) ಮಾರ್ಚ್ 11

(3) ಮಾರ್ಚ್ 13

(4) ಮಾರ್ಚ್ 15

**53.** ಕೇಂದ್ರ ಸರ್ಕಾರದ ಸಂಪುಟ ಕಾರ್ಯದರ್ಶಿ ಯಾರು ?

(1) ಚಂದ್ರ ಶೇಖರ

(2) ಶ್ಯಾಮಲಾಲ್ ಯಾದವ್

(3) ಅನಂತ್

(4) ಸಂಜೀವ ಬಜಾಜ್

**54.** ಈ ಕೆಳಕಂಡ ಕೇಂದ್ರೀಯ ಜಾಗೃತ ಆಯುಕ್ತರ ನೇಮಕಾತಿಯು ವಿವಾದವನ್ನೆಬ್ಬಿಸಿದೆ.

(1) ಪಿ.ಜೆ. ಥಾಮಸ್

(2) ಪಿ.ಕೆ. ಕಲ್ಮಾಡಿಯಾ

(3) ಕೆ.ಆರ್. ಮ್ಯಾಥ್ಯೂ

(4) ಪಿ.ಡಿ. ದಿನಕರನ್

**55.** ಇತ್ತೀಚೆಗೆ ಸುದ್ದಿಯಲ್ಲಿರುವ ಲಿಬಿಯಾದ ಅಧ್ಯಕ್ಷರ ಹೆಸರು

(1) ಹೋಸ್ನಿ ಮುಬಾರಕ್

(2) ಮುಅಮ್ಮರ್ ಗಡ್ಡಾಫಿ

(3) ಅಬ್ದುಲ್ಲಾ ಸಾಲೇಹ್

(4) ಹುಸೇನ್ ಅಲಿ

**56.** ಅರುಣಾ ಶಾನುಭಾಗ ಪ್ರಕರಣ ಯಾವುದಕ್ಕೆ ಸಂಬಂಧಿಸಿದೆ ?

(1) ವರದಕ್ಷಿಣೆ ಸಾವು

(2) ಸುಖಮರಣ (Euthanasia)

(3) ಗಡೀಪಾರು ಮಾಡುವಿಕೆ

(4) ಮಾನನಷ್ಟ ಪ್ರಕರಣ

**57.** ಕರ್ನಾಟಕ ಸರ್ಕಾರವು ಮಲೆನಾಡು ಪ್ರದೇಶದಲ್ಲಿ ಕೆಳಕಂಡ ಬೆಳೆ ನೆಡುವಿಕೆಯನ್ನು ಇತ್ತೀಚೆಗೆ ನಿಷೇಧಿಸಿದೆ

(1) ತೇಗ

(2) ಹುಣಸೆ

(3) ನೀಲಗಿರಿ

(4) ಸೀಗೆಕಾಯಿ

**58.** 2G ಹಗರಣ ಯಾವುದಕ್ಕೆ ಸಂಬಂಧಿಸಿದೆ ?

(1) ಕ್ರಿಕೆಟ್

(2) ರಿಯಲ್ ಎಸ್ಟೇಟ್

(3) ದೂರ ಸಂಪರ್ಕ

(4) ಅಕ್ರಮ ಹಣದ ವರ್ಗಾವಣೆ (money laundering)

**49.** World water day is celebrated on

(1) $23^{rd}$ March

(2) $26^{th}$ March

(3) $22^{nd}$ March

(4) $19^{th}$ March

**50.** Popular Hollywood actress who died recently of cancer

(1) Sophia Loren

(2) Marlin Monroe

(3) Elizabeth Taylor

(4) Mary Douglas

**51.** The Chief Editor of Wiki Leaks is

(1) Julian Assange

(2) Bob Hanks

(3) Christopher Lee

(4) Dave Barber

**52.** A devastating Tsunami hit Japan on

(1) March, 9

(2) March, 11

(3) March, 13

(4) March, 15

**53.** The Cabinet Secretary of Union Government is

(1) Chandrashekar

(2) Shyamlal Yadav

(3) Ananth

(4) Sanjiv Bajaj

**54.** The Central Vigilance Commissioner whose appointment has become controversial.

(1) P.J. Thomas

(2) P.K. Kalmadia

(3) K.R. Mathew

(4) P.D. Dinakaran

**55.** The Libyan President who is recently in news

(1) Hosni Mubarak

(2) Muammar Qaddafi

(3) Abdullah Saleh

(4) Hussain Ali

**56.** Aruna Shanbaug case was related to

(1) Dowry-death

(2) Euthanasia

(3) Deportation

(4) Defamation

**57.** The Karnataka Government recently banned in Malnad area plantation of

(1) Teak

(2) Tamarind

(3) Eucalyptus

(4) Shikakai

**58.** 2G scam refers to

(1) Cricket

(2) Real estate

(3) Tele-communications

(4) Money-laundering

59. ಭಾರತದ ಮೊದಲ ಯುದ್ಧ ವಿಮಾನ (Fighter aircraft)ದ ಹೆಸರು :
(1) ವೈಜಯಂತ
(2) ಲಿಜಾಸ್
(3) ಅರ್ಜುನ್
(4) ತೇಜಸ್

60. ಭಾರತದ ವಿದೇಶಾಂಗ ಕಾರ್ಯದರ್ಶಿಯ ಹೆಸರು :
(1) ಎಂ.ಕೆ. ನಾರಾಯಣನ್
(2) ನಾರಾಯಣ ರಾವ್
(3) ನಿರುಪಮಾ ರಾವ್
(4) ಜಿ. ಕೆ. ಪಿಳ್ಳೆ

61. ಬ್ರಹ್ಮೋಸ್ ಎಂಬ ಧ್ವನ್ಯಾತೀತ ಕಾವಲು ಕ್ಷಿಪಣಿಯು (Cruise missile) ಈ ಕೆಳಕಂಡ ಎರಡು ದೇಶಗಳ ನಡುವಿನ ಜಂಟಿ ಸಹಯೋಗದ ಪ್ರಯತ್ನದ ಫಲವಾಗಿ ರೂಪುಗೊಂಡಿದೆ.
(1) ಭಾರತ ಮತ್ತು ರಷ್ಯಾ
(2) ಭಾರತ ಮತ್ತು ಸಂಯುಕ್ತ ಸಂಸ್ಥಾನ
(3) ಭಾರತ ಮತ್ತು ಫ್ರಾನ್ಸ್
(4) ಭಾರತ ಮತ್ತು ರುಮೇನಿಯಾ

62. ಅರಬ್ ಒಕ್ಕೂಟದ ಪ್ರಧಾನ ಕಛೇರಿ ಇರುವ ಸ್ಥಳ :
(1) ಕೈರೊ
(2) ಇಸ್ತಾನ್‌ಬುಲ್
(3) ಟ್ರಿಪೋಲಿ
(4) ಬೈರೂಟ್

63. ಕರ್ನಾಟಕದಿಂದ ರಾಜ್ಯಸಭೆಗೆ ಇತ್ತೀಚೆಗೆ ಆಯ್ಕೆಯಾದ ಸಿನಿಮಾ ತಾರೆ :
(1) ರೇಖಾ
(2) ಹೇಮಾಮಾಲಿನಿ
(3) ಪಾರ್ವತಿ ಮೆಲ್ಟನ್
(4) ರಮ್ಯಾ

64. ಪರಿಶುದ್ಧವಾದ ಚಿನ್ನವು (24 ಕ್ಯಾರೆಟ್) ಆಭರಣಗಳ ತಯಾರಿಕೆಗೆ ಯಾಕೆ ಸೂಕ್ತವಲ್ಲ ?
(1) ಪರಿಶುದ್ಧವಾದ ಚಿನ್ನವು ಬಹಳವಾಗಿ ಹೊಳೆಯುವುದಿಲ್ಲ.
(2) ಪರಿಶುದ್ಧವಾದ ಚಿನ್ನವು ಆಭರಣಗಳ ತಯಾರಿಕೆಗೆ ತೀರಾ ಮೆದುವಾಗಿರುವುದರಿಂದ.
(3) ಅದರ ಪರಿಶುದ್ಧತೆಯನ್ನು ಕಾಪಾಡಿಕೊಳ್ಳುವುದು ಅತ್ಯಂತ ಕಷ್ಟಕರ.
(4) ಬಹಳ ವಿರಳವಾಗಿ ಪರಿಶುದ್ಧ ಚಿನ್ನ ಲಭ್ಯವಾಗುತ್ತದೆ.

65. ಬಹ್ರೇನಿನಲ್ಲಿರುವ ಬಹುಸಂಖ್ಯಾತ ಜನರು ಕೆಳಕಂಡ ಪಂಗಡದವರು
(1) ಶಿಯಾಗಳು (2) ಅಹ್ಮದೀಯರು
(3) ಸುನ್ನಿಗಳು (4) ಪಾರ್ಸಿಗಳು

66. ಅಫಘಾನಿಸ್ತಾನದ ಅಧ್ಯಕ್ಷರ ಹೆಸರು :
(1) ಮೊಹಮದ್ ಉಸ್ಮಾನ್ ಕರ್ಜಾಯಿ
(2) ಹಮೀದ್ ಕರ್ಜಾಯಿ
(3) ಹಮೀದ್ ಕಫಿಉಲ್ಲಾ
(4) ಮೊಹಮದ್ ಭಟ್

67. ಜಪಾನಿನಲ್ಲಿ ಇತ್ತೀಚೆಗೆ ಸಂಭವಿಸಿದ ಭೂಕಂಪ ಹಾಗೂ ಸುನಾಮಿಯಿಂದ ತೀವ್ರವಾಗಿ ಹಾನಿಗೀಡಾದ ನ್ಯೂಕ್ಲಿಯರ್ ರಿಯಾಕ್ಟರ್
(1) ಕಶಿವಾಜ಼ಾಕಿ ಕರಿವಾ ನ್ಯೂಕ್ಲಿಯರ್ ಸ್ಥಾವರ
(2) ಫುಕುಶಿಮಾ ಡಯಿಚಿ ನ್ಯೂಕ್ಲಿಯರ್ ಸ್ಥಾವರ
(3) ಹಿಗಾಶಿ ಡೋರಿ ನ್ಯೂಕ್ಲಿಯರ್ ಸ್ಥಾವರ
(4) ಹಾಮವೋಕಾ ನ್ಯೂಕ್ಲಿಯರ್ ಸ್ಥಾವರ

59. The first Indian fighter aircraft is called :

(1) Vijyanta
(2) Lejas
(3) Arjun
(4) Tejas

60. The Foreign Secretary of India is

(1) M.K. Narayanan
(2) Narayan Rao
(3) Nirupama Rao
(4) G.K Pillai

61. BrahMos which is a supersonic cruise missile, is the outcome of a joint collaborative effort between

(1) India and Russia
(2) India and United States
(3) India and France
(4) India and Romania

62. The headquarters of the Arab League is based in

(1) Cairo
(2) Istanbul
(3) Tripoli
(4) Beirut

63. A film star recently elected to Rajya Sabha from Karnataka is

(1) Rekha
(2) Hemamalini
(3) Parvathi Melton
(4) Ramya

64. Why is pure (24 Carat) gold not suitable for making jewellery ?

(1) Pure gold does not sparkle very much.
(2) Pure gold is too soft to be used in jewellery.
(3) It is extremely difficult to retain its purity.
(4) Pure gold is extremely rare to obtain.

65. The majority of the people of Bahrain are

(1) Shias
(2) Ahmediyas
(3) Sunnis
(4) Parsis

66. The President of Afghanistan is

(1) Mohammed Usman Karzai
(2) Hamid Karzai
(3) Hamid Kafiullah
(4) Mohammed Bhatt

67. The nuclear reactor that was severely damaged during the March 2011 earthquake and Tsunami in Japan is

(1) The Kashiwazaki Kariwa nuclear plant.
(2) The Fukushima Daiichi nuclear plant.
(3) The Higashi-Dori nuclear plant.
(4) The Hamaoka nuclear plant.

68. "God's own country" ಎಂಬ ನುಡಿಗಟ್ಟನ್ನು ಭಾರತದ ಯಾವ ರಾಜ್ಯಕ್ಕೆ ಸಂಬಂಧಿಸಿದಂತೆ ಆಗಾಗ್ಗೆ ಬಳಸಲಾಗುತ್ತದೆ ?
(1) ಗೋವಾ
(2) ಹಿಮಾಚಲ ಪ್ರದೇಶ
(3) ಕರ್ನಾಟಕ
(4) ಕೇರಳ

69. ಭೂಕಂಪನದ ತೀವ್ರತೆಯನ್ನು ಯಾವುದರಿಂದ ಅಳೆಯುತ್ತಾರೆ ?
(1) ಸೀಸ್ಮೋಗ್ರಾಫ್
(2) ಸೀಸ್ಮೋಗ್ರಾಮ್
(3) ಬಾರೊಮೀಟರ್
(4) ಹೈಡ್ರೋಮೀಟರ್

70. ಭೂಮಿಯ ಸುತ್ತ ವೃತ್ತಾಕಾರದ ಕಕ್ಷೆಯಲ್ಲಿ ಒಂದು ಉಪಗ್ರಹವು ಕಕ್ಷೆಯಲ್ಲಿದೆ. ರಿಮೋಟ್ ಕಂಟ್ರೋಲ್‌ನಿಂದ ಅದನ್ನು ಕಡಿಮೆ ತ್ರಿಜ್ಯದ ಕಕ್ಷೆಗೆ ತೆಗೆದುಕೊಂಡು ಬಂದಾಗ
(1) ಉಪಗ್ರಹದ ಮೇಲಿನ ಗುರುತ್ವಾಕರ್ಷಣಬಲ ಹಾಗೂ ಅದರ ವೇಗ ಹೆಚ್ಚಾಗುತ್ತದೆ.
(2) ಉಪಗ್ರಹದ ಮೇಲಿನ ಗುರುತ್ವಾಕರ್ಷಣಬಲ ಹೆಚ್ಚಾಗುತ್ತದೆ ಆದರೆ ಅದರ ವೇಗ ಕಡಿಮೆಯಾಗುತ್ತದೆ.
(3) ಉಪಗ್ರಹದ ಮೇಲಿನ ಗುರುತ್ವಾಕರ್ಷಣಬಲ ಕಡಿಮೆಯಾಗುತ್ತದೆ ಆದರೆ ಅದರ ವೇಗ ಹೆಚ್ಚಾಗುತ್ತದೆ.
(4) ಉಪಗ್ರಹದ ಮೇಲಿನ ಗುರುತ್ವಾಕರ್ಷಣಬಲ ಹಾಗೂ ಅದರ ವೇಗ ಕಡಿಮೆಯಾಗುತ್ತವೆ.

71. ಈ ಕೆಳಕಂಡ ವಿಷಯಕ್ಕೆ ಸಂಬಂಧಿಸಿದ ವಿವಿಧ ಶಿಫಾರಸುಗಳನ್ನು/ಅಯ್ಕೆಗಳನ್ನು ರೂಪಿಸುವುದಕ್ಕಾಗಿ ಸರ್ವೋಚ್ಚ ನ್ಯಾಯಾಲಯದ ಮಾಜಿ ನ್ಯಾಯಮೂರ್ತಿ ಬಿ.ಎಸ್. ಶ್ರೀಕೃಷ್ಣ ಅವರ ನೇತೃತ್ವದ ಸಮಿತಿಯನ್ನು ರಚಿಸಲಾಗಿತ್ತು
(1) ಬೋಡೋಲ್ಯಾಂಡ್ ವಿವಾದ
(2) ಮಿಜೋ ವಿವಾದ
(3) ಗೂರ್ಖಾಲ್ಯಾಂಡ್ ವಿವಾದ
(4) ತೆಲಂಗಾಣಾ ವಿವಾದ

72. ಜೆಟ್ ಇಂಜಿನ್, ಯಾವ ತತ್ವದ ಮೇಲೆ ಕೆಲಸ ಮಾಡುತ್ತದೆ ?
(1) ಐನ್‌ಸ್ಟೀನನ ಸಂಬಂಧ $E = mc^2$
(2) ದ್ರವ್ಯರಾಶಿಯ ಸಂರಕ್ಷಣೆ
(3) ಶಕ್ತಿಯ ಸಂರಕ್ಷಣೆ
(4) ರೇಖೀಯ ಸಂವೇಗದ ಸಂರಕ್ಷಣೆ

73. ಬಣ್ಣಹಚ್ಚುವ ಬ್ರಶ್‌ನ ಬಿರುಕೂದಲುಗಳು ನೀರಿನಲ್ಲಿಟ್ಟಾಗ ಬಿಡಿಬಿಡಿಯಾಗಿರುತ್ತವೆ ಆದರೆ ನೀರಿನಿಂದ ಹೊರತೆಗೆದಾಗ ಒಂದಕ್ಕೊಂದು ಅಂಟಿಕೊಳ್ಳತ್ತವೆ. ಇದಕ್ಕೆ ಕಾರಣ
(1) ನೀರಿನ ಸ್ನಿಗ್ಧತೆ
(2) ಬಣ್ಣದ ಅಂಟುವಿಕೆ ಸ್ವಭಾವ
(3) ಬಿರುಗೂದಲುಗಳ ನಡುವಿನ ಅಂಟುಬಲಗಳು
(4) ಮೇಲ್ಮೈ ಕರ್ಷಣ

74. ಈ ಕೆಳಗಿನ ಯಾವುದು ಡೋಪ್ಲರ್ ಪರಿಣಾಮಕ್ಕೆ ಉದಾಹರಣೆ ?
(1) ಶಬ್ದದ ಆಕರವೊಂದು ಕೇಳುಗನಿಂದ ದೂರವಾಗುತ್ತ ಹೋದಂತೆ ಪಿಚ್‌ನಲ್ಲಿ ಹಠಾತ್ ಆಧಿಕ್ಯತೆ.
(2) ಶಬ್ದದ ಆಕರದಿಂದ ಕೇಳುಗನು ದೂರವಾಗುತ್ತ ಹೋದಂತೆ ಪಿಚ್‌ನಲ್ಲಿ ಹಠಾತ್ ಆಧಿಕ್ಯತೆ.
(3) ಚಲಿಸುತ್ತಿರುವ ಶಬ್ದದ ಆಕರವು ಕೇಳುಗನ ಮುಂದೆ ಹಾದು ಹೋದಾಗ ಪಿಚ್‌ನಲ್ಲಿ ಹಠಾತ್ ಕುಸಿತ.
(4) ಶಬ್ದದ ಆಕರವು ಕೇಳುಗನಿಗೆ ಸಮೀಪವಾಗುತ್ತಿದ್ದಂತೆ ಪಿಚ್‌ನಲ್ಲಿ ಸತತ ಕುಸಿತ.

68. "God's own country" is a phrase often used with reference to which State in India ?

(1) Goa
(2) Himachal Pradesh
(3) Karnataka
(4) Kerala

69. The intensity of earthquakes is measured by

(1) A seismograph
(2) Seismogram
(3) Barometer
(4) Hydrometer

70. A satellite is in orbit around the earth in a circular orbit. If it is taken to an orbit of lower radius by remote control:

(1) The gravitational force on the satellite and its speed increase.
(2) The gravitational force on the satellite increases but its speed decreases.
(3) The gravitational force on the satellite decreases but its speed increases.
(4) The gravitational force on the satellite and its speed decrease.

71. The Committee headed by the former Supreme Court Justice B.N. Srikrishna was constituted to come out with various recommendations/options pertaining to

(1) The Bodoland issue
(2) The Mizo issue
(3) The Gorkhaland issue
(4) The Telengana issue

72. A jet engine works on the principle of

(1) Einstein's relation $E = mc^2$
(2) Conservation of mass
(3) Conservation of energy
(4) Conservation of linear momentum.

73. The bristles of a paint brush stay apart under water, but cling together when taken out. This is because of

(1) viscosity of water
(2) the sticky nature of the paint.
(3) adhesive forces between the bristles.
(4) surface tension.

74. Which of the following is an example of Doppler effect ?

(1) Sudden increase in the pitch when a sound source is moving away from the listener.
(2) Sudden increase in pitch when the listener is moving away from the sound source.
(3) Sudden drop in pitch as a moving sound source passes the listener.
(4) Continuous drop in pitch as the sound source approaches a listener.

**75.** ಬ್ಲಾಟಿಂಗ್ ಕಾಗದವು ಶಾಯಿಯನ್ನು ಹೇಗೆ ಹೀರಿಕೊಳ್ಳುತ್ತದೆ ?

(1) ಅಧಿಶೋಷಣೆಯ ಮೂಲಕ

(2) ಕೆಪಿಲರಿ ಕ್ರಿಯೆಯ ಮೂಲಕ

(3) ಕಾಗದ ಮತ್ತು ಶಾಯಿಯ ರಾಸಾಯನಿಕ ಪ್ರತಿಕ್ರಿಯೆಯಿಂದ.

(4) ಅಯಾನೀಕರಣದ ಮೂಲಕ

**76.** ಸೋಪಿನ ಗುಳ್ಳೆಯು ಬಣ್ಣಬಣ್ಣವಾಗಿ ಕಾಣಿಸುತ್ತದೆ. ಇದಕ್ಕೆ ಕಾರಣ :

(1) ಚೆದುರಿಕೆ (2) ವ್ಯತಿಕರಣ

(3) ಪ್ರತಿಫಲನ (4) ವಕ್ರೀಭವನ

**77.** ಹಾಲು ಮೊಸರಾಗುವುದು ಯಾವುದಕ್ಕೆ ಉದಾಹರಣೆ ?

(1) ಪ್ರತಿಲೋಮನ

(2) ಹೈಡ್ರಾಲಿಸಿಸ್

(3) ವಿಕೃತಗೊಳ್ಳುವಿಕೆ

(4) ಗರಣಿಕಟ್ಟುವಿಕೆ

**78.** ಆಕಾಶವು ನೀಲಿಯಾಗಿ ಕಾಣುವುದಕ್ಕೆ ಕಾರಣ :

(1) ವಾತಾವರಣವು ನೀಲಿಯ ಬೆಳಕನ್ನು ಹೆಚ್ಚಾಗಿ ಚೆದುರಿಸುತ್ತದೆ.

(2) ನೀಲಿ ಬೆಳಕಿನ ವೆಲಾಸಿಟಿಯು ಇತರ ಬಣ್ಣಗಳ ವೆಲಾಸಿಟಿಗಿಂತ ಅಧಿಕವಾಗಿರುವುದರಿಂದ ಅದು ನೋಡುಗರಿಗೆ ಎಲ್ಲಕ್ಕಿಂತ ಮೊದಲು ತಲುಪುತ್ತದೆ.

(3) ಸೂರ್ಯನಿಂದ ಬರುವ ನೀಲಿ ಬೆಳಕಿನ ತೀವ್ರತೆಯು ಅಧಿಕವಾಗಿರುತ್ತದೆ.

(4) ವಾತಾವರಣದಲ್ಲಿ ನೀಲಿ ಬಣ್ಣದ ಬೆಳಕು ಅತ್ಯಂತ ಕಡಿಮೆ ಹೀರಲ್ಪಡುತ್ತದೆ.

**79.** ಜಿಐ ಕೊಳವೆಗಳಲ್ಲಿ ಕಬ್ಬಿಣದ ಸಂಕ್ಷಾರಣವನ್ನು ಈ ಕೆಳಕಂಡ ಲೇಪನದ ಮೂಲಕ ತಡೆಗಟ್ಟಲಾಗುವುದು.

(1) ಅಲ್ಯೂಮಿನಿಯಂ

(2) ಟಿನ್

(3) ಜಿಂಕ್

(4) ಮೆಗ್ನೀಶಿಯಂ

**80.** ಮಾಲಿನ್ಯದಿಂದಾಗಿ ನದೀನೀರಿನ ಒಂದು ಸ್ಯಾಂಪಲ್ಲು ಆಮ್ಲೀಯವಾಗಿರುವುದು ಕಂಡು ಬಂದಿತು. ಅದರ pH ಮೌಲ್ಯ ಎಷ್ಟಿರಬಹುದು ?

(1) 5.3

(2) 7.4

(3) 10.5

(4) 14.0

**81.** ರೆಫ್ರಿಜಿರೇಟರ್ ಯಾವ ತತ್ವದ ಮೇಲೆ ಕೆಲಸಮಾಡುತ್ತದೆ ?

(1) ಉಷ್ಣಬಲಕ್ರಿಯಾಶಾಸ್ತ್ರದ 1ನೇ ನಿಯಮದಂತೆ

(2) ಉಷ್ಣಬಲಕ್ರಿಯಾಶಾಸ್ತ್ರದ 2ನೇ ನಿಯಮದಂತೆ

(3) ಜೌಲ್ಸ್‌ನ ನಿಯಮದಂತೆ

(4) ಕೊಲಂಬ್‌ನ ನಿಯಮದಂತೆ

**82.** TV ಸಂವಹನದಲ್ಲಿ ----- ಇದ್ದರೆ ಒಳ್ಳೆಯದು.

(1) ಆಂಪ್ಲಿಟ್ಯೂಡ್ ಮಾಡ್ಯೂಲೇಶನ್

(2) ಫ್ರೀಕ್ವೆನ್ಸಿ ಮಾಡ್ಯೂಲೇಶನ್

(3) ಫೇಸ್ ಮಾಡ್ಯೂಲೇಶನ್

(4) ತರಂಗಾಂತರ (ವೇವ್‌ಲೆಂಗ್ತ್) ಮಾಡ್ಯೂಲೇಶನ್

**83.** ಕ್ಲೋರೋಫಿಲ್ ನಲ್ಲಿರುವ ಲೋಹ

(1) ಕಬ್ಬಿಣ

(2) ತಾಮ್ರ

(3) ಮೆಗ್ನೀಶಿಯಂ

(4) ಜಿಂಕ್

**75.** How does blotting paper absorb ink ?

(1) Through absorption.

(2) By capillary action.

(3) Chemical reaction of paper and ink.

(4) By ionization.

**76.** Soap bubble appears coloured. It is due to

(1) Scattering

(2) Interference

(3) Reflection

(4) Refraction

**77.** Curding of milk is an example of

(1) Inversion

(2) Hydrolysis

(3) Denaturation

(4) Coagulation

**78.** The sky appears blue because

(1) Blue light is scattered most by the atmosphere.

(2) The velocity of blue light being greater than that of other colours, it reaches the observer first.

(3) The intensity of blue light from the sun is more.

(4) Light of blue colour is absorbed the least in the atmosphere.

**79.** In GI pipes corrosion of iron is prevented by a coating with

(1) Aluminium

(2) Tin

(3) Zinc

(4) Magnesium

**80.** Due to pollution a sample of river water was found to be acidic. Its pH would be

(1) 5.3 (2) 7.4

(3) 10.5 (4) 14.0

**81.** A refrigerator is working under the principle of

(1) First law of thermodynamics.

(2) Second law of thermodynamics.

(3) Joules law.

(4) Coulomb's law.

**82.** In TV Communication _________ is preferred.

(1) Amplitude Modulation

(2) Frequency Modulation

(3) Phase Modulation

(4) Wavelength Modulation

**83.** The metal present in chlorophyll is

(1) Iron

(2) Copper

(3) Magnesium

(4) Zinc

**84.** ಅಪ್ರತಿಮ ಪ್ರತಿಭಾಶಾಲಿ ಗಣಿತಜ್ಞ ಎಸ್. ರಾಮಾನುಜಂ ಅವರು ಸಂಖ್ಯೆಯೊಂದನ್ನು ಕುರಿತು, "ಇದು ಬಹಳ ಕುತೂಹಲಕಾರಿ ಸಂಖ್ಯೆ. ಇದು ಅತ್ಯಂತ ಚಿಕ್ಕ ಸಂಖ್ಯೆಯಾಗಿದ್ದು ಇದನ್ನು ಎರಡು ಘನಗಳ ಮೊತ್ತವೆಂದು ಎರಡು ವಿಭಿನ್ನ ರೀತಿಗಳಲ್ಲಿ ವ್ಯಕ್ತಪಡಿಸಬಹುದಾಗಿದೆ", ಎಂದು ಹೇಳಿದ್ದಾರೆ. ಈ ಪ್ರಸಿದ್ಧ ಸಂಖ್ಯೆ ಯಾವುದು ?

(1) 1000

(2) 1729

(3) 1800

(4) 1829

**85.** ಭಾರತೀಯ ಅಡುಗೆಗಳಲ್ಲಿ ಬಳಸಲಾಗುವ ಮೆಣಸಿನಕಾಯಿಯ ಖಾರಕ್ಕೆ ಅವುಗಳಲ್ಲಿ ಕ್ಯಾಪ್ಸೈಸಿನ್ (Capsaicinoids) ಎಂಬ ವಸ್ತು ಇರುವುದು ಕಾರಣ. ಈ ಕ್ಯಾಪ್ಸೈಸಿನೊಯಿಡಗಳು ಮೆಣಸಿನಕಾಯಿಯ ಯಾವ ನಿರ್ದಿಷ್ಟ ಭಾಗದಲ್ಲಿರುತ್ತವೆ ?

(1) ಬೀಜಗಳಲ್ಲಿ

(2) ಕಾಂಡದಲ್ಲಿ

(3) ಹೊರಗಿನ ಪೊರೆಯಲ್ಲಿ

(4) ಒಳಗಿನ ಪೊರೆಯಲ್ಲಿ

**86.** <u>www.twitter.com</u> ವೆಬ್ ಸೈಟನ್ನು ಇತ್ತೀಚಿನ ದಿನಗಳಲ್ಲಿ ವಿವಿಧ ಹಿನ್ನೆಲೆಯ ಜನರು ತಮ್ಮ ದೃಷ್ಟಿಕೋನ ಹಾಗೂ ಅಭಿಪ್ರಾಯಗಳನ್ನು ಕಳುಹಿಸುವುದಕ್ಕಾಗಿ ಬಳಸುತ್ತಿದ್ದಾರೆ. ಟ್ವಿಟರ್‌ನ್ನು ಸೃಷ್ಟಿಸಿದವರು ಯಾರು ?

(1) ಮಾರ್ಕ್ ಜುಕೆಲ್‌ಬರ್ಗ್

(2) ಸಬೀರ್ ಭಾಟಿಯಾ

(3) ಜಾಕ್ ಡೋರ್ಸಿ

(4) ಜಿಮ್ಮಿ ವೇಲ್ಸ್

**87.** 'ಅಲ್ಗೋರಿದಂ' ಎಂಬ ಪದವು ಗಣಿತ ಮತ್ತು ಗಣಕ ವಿಜ್ಞಾನದಲ್ಲಿ ಬಳಕೆಯಾಗುವಂಥ ಕೆಲವು ಸ್ಪಷ್ಟವಾಗಿ ನಿರ್ವಚಿಸಲಾದ ಸೂಚನೆಗಳ ಪಟ್ಟಿಗೆ ಸಂಬಂಧಿಸಿದೆ. 'algorithm' ಎಂಬ ಪದ ಯಾವ ಮೂಲದಿಂದ ಬಂದಿದೆ ?

(1) ಭಾರತೀಯ

(2) ಪರ್ಶಿಯನ್

(3) ಅಮೇರಿಕನ್

(4) ಚೀನೀ

**88.** ವಾಹನಗಳ ಟೈರಿನಲ್ಲಿ ತುಂಬಲು ಗಾಳಿಗೆ ಬದಲಾಗಿ ನೀರನ್ನು ಏಕೆ ಬಳಸುವುದಿಲ್ಲ ?

(1) ಗಾಳಿಯಂತೆ ನೀರನ್ನು ಚೆನ್ನಾಗಿ ಸಂಕೋಚನಕ್ಕೆ ಒಳಪಡಿಸಲು ಸಾಧ್ಯವಿಲ್ಲ.

(2) ಚಳಿಗಾಲದಲ್ಲಿ ನೀರು ಮಂಜುಗಡ್ಡೆಯಾಗ ಬಹುದು. ಇದರಿಂದ ಸಮತೋಲನದ ಸಮಸ್ಯೆಗಳು ಬರಬಹುದು.

(3) ಗಾಳಿಗಿಂತ ನೀರು ದುಬಾರಿ.

(4) ನೀರು ಟೈರಿನೊಂದಿಗೆ ಪ್ರತಿಕ್ರಿಯಿಸ-ಬಹುದು.

**89.** ಚೆನ್ನಾಗಿ ಮಳೆಯಾದ ನಂತರ ವಿಶಿಷ್ಟವಾದ ಆಹ್ಲಾದಕರ ವಾಸನೆಯ ಅನುಭವವಾಗುತ್ತದೆ. ಈ ವಾಸನೆಗೆ ಕಾರಣವೇನು ?

(1) ಮಳೆನೀರಿನಲ್ಲಿ ಕರಗಿರುವ ಕೆಲವು ರಾಸಾಯನಿಕಗಳು.

(2) ಒದ್ದೆಯಾದ ಮಣ್ಣಿನಲ್ಲಿ ಬೆಳೆಯುವಂಥ ಕೆಲವು ರೀತಿಯ ಬ್ಯಾಕ್ಟೀರಿಯಾಗಳ ಕ್ರಿಯೆ.

(3) ಮಳೆಬಿದ್ದಾಗ ಗಿಡ(ಮರ)ದ ಎಲೆಗಳು ಒದ್ದೆಯಾಗುವ ಕಾರಣದಿಂದ.

(4) ತೇವಭರಿತ ತಂಗಾಳಿಯೊಂದಿಗೆ ಸೇರಿಕೊಂಡಿರುವಂಥ ರಾಸಾಯನಿಕಗಳು ಕಾರಣ.

**84.** The brilliant mathematician S Ramanujam referred to a number as " it is very interesting number. This number is the smallest number expressible as the sum of two cubes in two different ways." What is this famous number ?

(1) 1000 (2) 1729

(3) 1800 (4) 1829

**85.** The hot (Spicy) nature of chillies used in Indian cooking is due to the presence of Capsaicin (Capsaicinoids). Where exactly are Capsaicinoids found inside chillies ?

(1) In the seeds

(2) In the stem

(3) Outer membrane

(4) Inner membrane

**86.** The website **<u>www.twitter.com</u>**, is nowadays used by people of various backgrounds to post views and comments. Who created twitter ?

(1) Mark Zuckelberg

(2) Sabeer Bhatia

(3) Jack Dorsey

(4) Jimmy Wales

**87.** The term **algorithm** refers to well-defined list of instructions, used in mathematics and computer science. What is the origin of this name **algorithm** ?

(1) Indian (2) Persian

(3) American (4) Chinese

**88.** Why is water not used to fill vehicle tyres instead of air ?

(1) Water is far less compressible than air.

(2) Water can freeze in winter and cause balancing problems.

(3) Water is more expensive than air.

(4) The water may react with the tyres.

**89.** Usually after heavy rains, a peculiar pleasant smell is experienced. Why is this ?

(1) Due to certain chemicals dissolved in the rain water.

(2) Due to the action of certain bacteria growing in the damp soil.

(3) Due to the dampness of plant (tree) leaves caused by the rain.

(4) Due to the chemicals associated with the wet breeze.

**90.** ರಾಜ್ಯ ಮತ್ತು ಕೇಂದ್ರ ಸೂಚಿಗಳೆರಡರಲ್ಲಿಯೂ ನಿರೂಪಿಸಲಾಗಿರುವ ಒಂದು ಬಾಬ್ತಿಗೆ ಸಂಬಂಧಿಸಿದಂತೆ ಕೇಂದ್ರ ಕಾನೂನು ಹಾಗೂ ರಾಜ್ಯದ ಕಾನೂನುಗಳ ನಡುವೆ ಘರ್ಷಣೆ ಉಂಟಾದಾಗ

(1) ಕೇಂದ್ರದ ಕಾನೂನೇ ಮೇಲುಗೈ-ಯಾಗುತ್ತದೆ.

(2) ಸಂಬಂಧಪಟ್ಟ ರಾಜ್ಯದ ಪ್ರಾದೇಶಿಕ ಪರಿಮಿತಿಯೊಂದಿಗೆ ರಾಜ್ಯದ ಕಾನೂನು ಮೇಲುಗೈಯಾಗುತ್ತದೆ.

(3) ರಾಜ್ಯದ ಕಾನೂನಿಗೆ ಕೇಂದ್ರದ ಕಾನೂನು ಎಡೆಮಾಡಿಕೊಡುತ್ತದೆ.

(4) ಕೇಂದ್ರದ ಕಾನೂನು ಮತ್ತು ರಾಜ್ಯದ ಕಾನೂನುಗಳೆರಡೂ ಒಂದೇ ರೀತಿಯ ಪರಿಣಾಮ ಹೊಂದಿರತಕ್ಕದ್ದು.

**91.** ಭಾರತೀಯ ಸಂವಿಧಾನದ ಪ್ರಕಾರ ವ್ಯಕ್ತಿಯೊಬ್ಬರು ಸಂಸತ್ತಿನ ಸದಸ್ಯರಾಗಿ ಆಯ್ಕೆಯಾದರೆ ಮತ್ತು ರಾಜ್ಯವೊಂದರ ವಿಧಾನಮಂಡಲದ ಸದನದಲ್ಲಿಯೂ ಇದ್ದರೆ, ಅಂಥವರು

(1) ತಾವು ಮೊದಲು ಯಾವುದಕ್ಕೆ ಚುನಾಯಿತರಾಗಿದ್ದರೋ ಆ ಸ್ಥಾನವನ್ನು ತೆರವು ಮಾಡಬೇಕಾಗುತ್ತದೆ.

(2) ರಾಜ್ಯಕ್ಕಿಂತ ಸಂಸತ್ತು ಮುಖ್ಯವಾದದ್ದಾಗಿರುವುದರಿಂದ ಅವರು ರಾಜ್ಯ ವಿಧಾನ ಮಂಡಲದಲ್ಲಿರುವ ಸ್ಥಾನವನ್ನು ತೆರವು ಮಾಡಬೇಕಾಗುತ್ತದೆ.

(3) ಅವರು ಸಂಸತ್ತು ಅಥವಾ ರಾಜ್ಯವಿಧಾನ ಮಂಡಲದ ಸ್ಥಾನಗಳಲ್ಲಿ ತಮ್ಮ ಆಯ್ಕೆಯಂತೆ ಯಾವುದಾದರೊಂದು ಸ್ಥಾನವನ್ನು ತೆರವು ಮಾಡಬೇಕಾಗುತ್ತದೆ.

(4) ರಾಷ್ಟ್ರಪತಿಯವರು ಮಾಡಿರುವಂಥ ನಿಯಮಗಳ ಮೂಲಕ ನಿರ್ದಿಷ್ಟಪಡಿಸಲಾದಂಥ ಅವಧಿಯೊಳಗೆ ಅವರು ಎರಡರಲ್ಲೊಂದು ಸ್ಥಾನವನ್ನು ತೆರವುಗೊಳಿಸದಿದ್ದರೆ, ಸಂಸತ್ತಿನಲ್ಲಿರುವ ಅವರ ಸ್ಥಾನವು ಖಾಲಿ ಎಂದಾಗತಕ್ಕದ್ದು.

**92.** ಈ ಕೆಳಗಿನ ಯಾರು ಕೇಂದ್ರದ ಲೆಕ್ಕಪತ್ರಗಳಿಗೆ ಸಂಬಂಧಿಸಿದ್ದಾರೆ ಮತ್ತು ಅವರನ್ನು ಭಾರತ ಸರ್ಕಾರದ "ಸಾರ್ವಜನಿಕ ಹಣದ" ಪಾಲಕರೆಂದು ಕರೆಯಲಾಗುತ್ತದೆ ?

(1) ಭಾರತದ ನಿಯಂತ್ರಕರು ಮತ್ತು ಮಹಾ ಲೇಖಾಪಾಲರು

(2) ಹಣಕಾಸು ಸಚಿವರು

(3) ಯೋಜನಾ ಆಯೋಗ

(4) ಹಣಕಾಸು ಆಯೋಗ

**93.** ಉಚ್ಚನ್ಯಾಯಾಲಯದ ನ್ಯಾಯಾಧೀಶರುಗಳನ್ನು ರಾಷ್ಟ್ರಪತಿಯವರು ಈ ಕೆಳಕಂಡವರೊಂದಿಗೆ ಸಮಾಲೋಚಿಸಿ ನೇಮಕ ಮಾಡುತ್ತಾರೆ :

(1) ಭಾರತದ ಮುಖ್ಯ ನ್ಯಾಯಮೂರ್ತಿಗಳು ಹಾಗೂ ಸರ್ವೋಚ್ಚ ನ್ಯಾಯಾಲಯದ ಇಬ್ಬರು ಅತ್ಯಂತ ಹಿರಿಯ ನ್ಯಾಯಾಧೀಶರುಗಳನ್ನೊಳಗೊಂಡ ಒಂದು ಮಂಡಳಿ (collegium)

(2) ಭಾರತದ ಮುಖ್ಯ ನ್ಯಾಯಮೂರ್ತಿಗಳು ಹಾಗೂ ಸರ್ವೋಚ್ಚ ನ್ಯಾಯಾಲಯದ ನಾಲ್ವರು ಅತ್ಯಂತ ಹಿರಿಯ ನ್ಯಾಯಾಧೀಶರುಗಳನ್ನೊಳಗೊಂಡ ಒಂದು ಮಂಡಳಿ

(3) ಭಾರತದ ಮುಖ್ಯ ನ್ಯಾಯಮೂರ್ತಿಗಳು ಮತ್ತು ಸಂಬಂಧಪಟ್ಟ ರಾಜ್ಯದ ರಾಜ್ಯಪಾಲರು.

(4) ಭಾರತದ ಮುಖ್ಯ ನ್ಯಾಯಮೂರ್ತಿಗಳು ಮತ್ತು ಸಂಬಂಧಪಟ್ಟ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳು.

**94.** ಭಾರತೀಯ ಸಂವಿಧಾನದಲ್ಲಿರುವ ಕೆಳಕಂಡ ಯಾವ ಅನುಚ್ಛೇದವು ಸಂಬಂಧಪಟ್ಟ ವಿಷಯ ವಸ್ತುವಿನ ಮಿತಿಗೊಳಪಡದೆ ಅಂತರರಾಷ್ಟ್ರೀಯ ಕೌಲುಗಳು, ಒಪ್ಪಂದಗಳು ಮತ್ತು ಒಡಂಬಡಿಕೆಗಳನ್ನು ಆಚರಣೆಗೆ ತರುವುದಕ್ಕಾಗಿ ಕಾನೂನುಗಳನ್ನು ಮಾಡಲು ಸಂಸತ್ತಿಗೆ ಅಧಿಕಾರವಿರುವುದನ್ನು ಪ್ರತಿಬಿಂಬಿಸುತ್ತದೆ ?

(1) ಅನುಚ್ಛೇದ 372 (2)

(2) ಅನುಚ್ಛೇದ 51 (C)

(3) ಅನುಚ್ಛೇದ 372 (1)

(4) ಅನುಚ್ಛೇದ 253

**90.** In case of conflict between Union law & State law in respect of an item enumerated in both the State & Union list

(1) Union law will prevail.

(2) State law will prevail with the territorial limit of that State.

(3) Union law will give way to State law.

(4) Both Union as well as State law shall have the same effect.

**91.** As per the Constitution of India, if a person is chosen as a Member of Parliament and also in House of a Legislature of a State, he/she

(1) has to vacate the seat in which he was elected earlier

(2) has to vacate the seat in State Legislature as Parliament is important than State

(3) has to vacate one seat at his option either of Parliament or State Legislature

(4) if he does not vacate one of the two seats in the period specified by rules made by President, his seat in Parliament shall become vacant

**92.** Which of the following is concerned with Accounts of Union and also known as guardian of 'Public Purse' of the Union of India ?

(1) Comptroller and Auditor General of India

(2) Finance Minister

(3) Planning Commission

(4) Finance Commission

**93.** Judges of the High Court are appointed by President in consultation with :

(1) a collegium consisting of Chief Justice of India and two senior most judges of the Supreme Court.

(2) a collegium consisting of Chief Justice of India and four senior most judges of the Supreme Court.

(3) Chief Justice of India and Governor of the concerned State.

(4) Chief Justice of India and Chief Justice of the concerned High Court

**94.** Which one of the following Articles in the Constitution of India reflects the power of Parliament to make laws for giving effect to international treaties, agreements and conventions without limit of its subject matter ?

(1) Art 372(2)

(2) Art 51(C)

(3) Art 372(1)

(4) Art 253

95. ಈ ಕೆಳಗಿನ ಯಾವುದು ಕೇಂದ್ರ ಸೂಚಿಯ ವ್ಯಾಪ್ತಿಯೊಳಗೆ ಸೇರಿಲ್ಲ ?

(1) ಅಂಚೆ ಸೇವೆ

(2) ರಕ್ಷಣೆ

(3) ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರಗಳು

(4) ಸಾರ್ವಜನಿಕ ಆರೋಗ್ಯ

96. ರದ್ದು ಪಡಿಸದ ಹೊರತು, ತುರ್ತು ಪರಿಸ್ಥಿತಿ **ಉದ್ಘೋಷಣೆಯ** ಗರಿಷ್ಠ ಅವಧಿ

(1) ಒಟ್ಟು $2\frac{1}{2}$ ವರ್ಷಗಳು

(2) ತುರ್ತು ಪರಿಸ್ಥಿತಿ **ಉದ್ಘೋಷಣೆಯ** ನಿರ್ಣಯವನ್ನು ಹೊರಡಿಸಿದ ದಿನದಿಂದ ಆರು ತಿಂಗಳು.

(3) 1 ವರ್ಷ

(4) ರಾಷ್ಟ್ರಪತಿಯವರು ಅಥವಾ ಸಂಸತ್ತು ರದ್ದು ಪಡಿಸುವ ವರೆಗೆ ಎಷ್ಟುಕಾಲದ ವರೆಗೂ ಇರಬಹುದು.

97. ಈ ಕೆಳಕಂಡ ಯಾವ ಸಂದರ್ಭದಲ್ಲಿ ರಾಷ್ಟ್ರಪತಿಯವರಾಗಲಿ ಅಥವಾ ಇತರ ಯಾವುದೇ ಪ್ರಾಧಿಕಾರವಾಗಲಿ ಕೇಂದ್ರ ಲೋಕಸೇವಾ ಆಯೋಗದೊಂದಿಗೆ ಸಮಾಲೋಚಿಸುವುದು ಕಡ್ಡಾಯವಾಗಿರು-ವುದಿಲ್ಲ?

(1) ಸಂವಿಧಾನದ 335ನೇ ಅನುಚ್ಛೇದದ ವ್ಯಾಪ್ತಿಯಲ್ಲಿ ಬರುವಂತಹ ವಿಷಯಗಳ ಸಂದರ್ಭ.

(2) ನೇಮಕಾತಿಗಳನ್ನು ಮಾಡುವಾಗ ಅನುಸರಿಸಬೇಕಾದ ತತ್ವಗಳ ಸಂದರ್ಭ.

(3) ಸೇವೆಯಲ್ಲಿದ್ದಾಗ ಸಿವಿಲ್ ನೌಕರರೊಬ್ಬರಿಗೆ ಆದಂಥ ಹಾನಿಗಳಿಗೆ (Injuries) ಸಂಬಂಧಿಸಿದಂತೆ ಪಿಂಚಣಿಯನ್ನು ನೀಡುವ ಸಂದರ್ಭ.

(4) ಶಿಸ್ತಿನ ವಿಷಯಗಳಿಗೆ ಸಂಬಂಧಿಸಿದಂಥ ಮನವಿಗಳ ಮತ್ತು ಅರ್ಜಿಗಳ ಸಂದರ್ಭ

98. ಭಾರತೀಯ ಸಂವಿಧಾನದ 'Basic Structure Doctrine' ಅನ್ನು ಮೊತ್ತ ಮೊದಲಿಗೆ ನಿರೂಪಿಸಲಾದ ಸಂದರ್ಭ

(1) ಕೇಶವಾನಂದ ಭಾರತಿ V ಕೇರಳ ರಾಜ್ಯ

(2) ಎ. ಕೆ. ಗೋಪಾಲನ್ V ಮದ್ರಾಸ ರಾಜ್ಯ

(3) ಶಂಕರಿ ಪ್ರಸಾದ V ಭಾರತ ಸರ್ಕಾರ

(4) ಗೋಲಕನಾಥ V ಪಂಜಾಬ್ ರಾಜ್ಯ

99. ಭಾರತೀಯ ಸಂವಿಧಾನದ ಪ್ರಕಾರ ಈ ಕೆಳಗಿನ ಯಾವ ಹಕ್ಕು ಮೂಲಭೂತ ಹಕ್ಕಾಗಿರುವುದಿಲ್ಲ ?

(1) ಸಮಾನತೆಯ ಹಕ್ಕು

(2) ವಾಕ್ ಸ್ವಾತಂತ್ರ್ಯದ ಹಕ್ಕು

(3) ಧರ್ಮವನ್ನು ಬದಲಾಯಿಸಿಕೊಳ್ಳುವ ಹಕ್ಕು

(4) ಕೆಲಸ ಮಾಡುವ ಹಕ್ಕು

100. ಸಂವಿಧಾನದ ಈ ಕೆಳಗಿನ ಯಾವ ಅನುಚ್ಛೇದವು 14 ವರ್ಷಕ್ಕಿಂತ ಕೆಳವಯಸ್ಸಿನ ಮಕ್ಕಳನ್ನು ಕಾರ್ಖಾನೆ, ಗಣಿ ಅಥವಾ ಇತರ ಅಪಾಯಕಾರಿ ಉದ್ಯೋಗಗಳಲ್ಲಿ ನೇಮಕ ಮಾಡಿಕೊಳ್ಳುವುದನ್ನು ನಿಷೇಧಿಸುತ್ತದೆ ?

(1) ಅನುಚ್ಛೇದ 24

(2) ಅನುಚ್ಛೇದ 21A

(3) ಅನುಚ್ಛೇದ 45

(4) ಅನುಚ್ಛೇದ 23

**95.** Which one of the following is not included in Union List ?

(1) Postal service

(2) Defence

(3) Audit and Accounts

(4) Public Health

**96.** Maximum period of proclamation of emergency unless revoked is —

(1) 2 ½ years in all.

(2) 6 months from passing of the resolution of proclamation of emergency.

(3) 1 year.

(4) Infinite till revoked by President or Parliament.

**97.** In which one of the following cases it is not mandatory for the President or any other authority to consult the Union Public Service Commission ?

(1) In matters covered by Article 335 of the Constitution.

(2) Principles to be followed in making appointments.

(3) Award of pension in respect of injuries sustained by a civil servant while in service.

(4) Memorials and petitions pertaining to disciplinary matters.

**98.** The 'Basic Structure Doctrine' of the Indian Constitution was first formulated in

(1) Kesavananda Bharati V.State of Kerala

(2) A.K.Gopalan V. State of Madras

(3) Shankari Prasad V. Union of India

(4) Golaknath V. State of Punjab

**99.** Which of the right below is not a fundamental right under the Indian Constitution ?

(1) Right to Equality

(2) Right to Freedom of Speech

(3) Right to change Religion

(4) Right to Work

**100.** Which of the following articles of the Constitution prohibits employment of children below 14 years of age in factories, mines or other hazardous employment ?

(1) Article 24

(2) Article 21 A

(3) Article 45

(4) Article 23

## ಚಿತ್ತುಬರಹಕ್ಕಾಗಿ ಸ್ಥಳ
## SPACE FOR ROUGH WORK

ಚಿತ್ತುಬರಹಕ್ಕಾಗಿ ಸ್ಥಳ

**SPACE FOR ROUGH WORK**

ಚಿತ್ತುಬರಹಕ್ಕಾಗಿ ಸ್ಥಳ

SPACE FOR ROUGH WORK

ಚಿತ್ತುಬರಹಕ್ಕಾಗಿ ಸ್ಥಳ

SPACE FOR ROUGH WORK

*DO NOT OPEN THIS QUESTION BOOKLET UNTIL YOU ARE ASKED TO DO SO*

# GK-I

**2011**

**Version Code**

**A**

## QUESTION BOOKLET

# GENERAL KNOWLEDGE

**Time Allowed : Two Hours** **Maximum Marks : 150**

### INSTRUCTIONS

1. Before writing the Questiion Booklet version code in the OMR sheet,you should check that this Question Booklet does NOT have any unprinted or torn or missing pages or questions etc. If so, get it replaced by a complete 'Question Booklet' of the available series.
2. Write and encode clearly the Question Booklet Version Code **A, B, C, D ......** or **H,** as the case may be, in the appropriate space provided for the purpose, in the Answer Sheet.
3. You have to enter your Register Number in the Question Booklet in the box provided alongside. DO NOT write anything else on the Question Booklet.

   **Register Number**

4. This Question Booklet contains **100** questions. Each question contains **four** responses (answers). Select the response which you want to mark on the Answer Sheet. In case you feel that there is more than one correct response, mark the response which you consider the best. In any case, choose *ONLY ONE RESPONSE* for each question.
5. All the responses should be marked ONLY on the separate Answer Sheet provided and ONLY in Black or Blue Ballpoint Pen. See instructions in the Answer Sheet.
6. All questions carry equal marks. **Attempt all questions.** Your total marks will depend only on the number of correct responses marked by you in the Answer Sheet.
7. Before proceeding to mark the responses in the Answer Sheet, you have to write and encode particulars regarding Register Number, Question Booklet Version Code etc., (along with your signature and Invigilator's signature) in the space provided for in the Answer Sheet.
8. Sheets for rough work are appended in the Question Booklet at the end. You should not make any marking on any other part of the Question Booklet.
9. Immediately after the final bell indicating the conclusion of the examination, stop making any further markings in the Answer Sheet. Be seated till the Answer Sheets are collected and accounted for by the Invigilator.
10. **Questions are printed both in Kannada and English. If any confusion arises in the Kannada Version, please refer to the English Version of the Questions.**
11. Use of calculators of any kind is **not** permitted.

SEAL

*DO NOT OPEN THIS QUESTION BOOKLET UNTIL YOU ARE ASKED TO DO SO.*

*ಗಮನಿಸಿ : ಸೂಚನೆಗಳ ಕನ್ನಡ ಆವೃತ್ತಿಯು ಈ ಪ್ರಶ್ನೆ ಪುಸ್ತಿಕೆಯ ಮುಂಭಾಗದಲ್ಲಿ ಮುದ್ರಿಸಲ್ಪಟ್ಟಿದೆ.*